ಜ್ಯೋತಿಕಾರ್ಯದ ವಾರ್ತಾಪತ್ರ



ಮಹರ್ಷಿ ಅಮರ (1919-1982)

**ಋಷಿಗಳು ಹೇಳಿಕೊಟ್ಟಂತೆ ನಾವು ಧ್ಯಾನವನ್ನು ಕಲಿಸುತ್ತೇವೆ.**

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದ್ದಾರೆ.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ-ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
★ ಪ್ರೀತಿ ನಮ್ಮ ಸ್ವಭಾವ.
★ ಮೌನ ನಮ್ಮ ಭಾಷೆ.
★ ಧ್ಯಾನ ನಮ್ಮ ಮಾರ್ಗ.
★ ಈ ಪ್ರಪಂಚ ನಮ್ಮ ಆಶ್ರಮ.
★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.
★ ದೇವರು ನಮ್ಮ ಗುರು. ಋಷಿಗಳು ನಮ್ಮ ಮಾರ್ಗದರ್ಶಕರು.

# ತಪೋವಾಣಿ

ಸಂ. 7 ಸಂ. 5 ಮೇ 2010 ರೂ.15

## ಅನಿಸಿಕೆಗಳು

**ಗುರೂಜಿ ಕೃಷ್ಣಾನಂದ**

**ಅನು: ಶ್ಯಾಮಲಾದೇವಿ**

ಹಿಂದೆಂದೂ ಇಂಥ ಜ್ಞಾನ, ಚೈತನ್ಯಗಳು, ಹಾಗೂ ಬೆಳಕಿನ ಮಾಸ್ಟರ್‌ಗಳು ಮತ್ತು ಸೂಕ್ಷ್ಮ ಲೋಕಗಳಿಂದ ಸಹಾಯ, ನಮಗೆ ದೊರೆತಿರಲಿಲ್ಲ. ಹಿಂದೆಂದೂ ಇಂಥ ಅವಕಾಶಗಳು ಮತ್ತು ಮಾರ್ಗದರ್ಶನ ನಮಗೆ ಸಿಕ್ಕಿರಲಿಲ್ಲ ಆದರೆ ನಾವು ಈಗ ಇರುವಂತಹ ಸನ್ನಿವೇಶಗಳಲ್ಲಿ, ನಾವು ಹಿಂದೆಂದೂ ಇರಲಿಲ್ಲ. ಸಂಕುಚಿತಗೊಂಡಿರುವ ಸಮಯ, ಸಂಕ್ಷಿಪ್ತಗೊಂಡಿರುವ ಪ್ರಳಯದ ಸಮಯ ಮತ್ತು 2012ರಿಂದ ಸಂಭವಿಸಬಹುದಾದ ಮಹತ್ತರ ಬದಲಾವಣೆಗಳು – ಇವು ಅಸಾಧಾರಣವಾದ ಸನ್ನಿವೇಶಗಳು. ಇವನ್ನು ಎದುರಿಸಲು, ನಾವು ಅಸಾಧಾರಣ ರೀತಿಗಳಲ್ಲಿ ಸಿದ್ಧರಾಗಬೇಕು. ಆದರೆ ಇದು ಆಗುತ್ತಿಲ್ಲ.

ಸ್ವಲ್ಪ ಕಾಲ, 2012ರ ಬಗ್ಗೆ ಸಿನಿಮಾ ಬಿಡುಗಡೆಯಾದಾಗ ಮತ್ತು ಸ್ಥಳೀಯ ಟಿವಿ ಚಾನಲ್‌ಗಳು ಪ್ರಪಂಚ ಅಂತ್ಯವಾಗುವುದರ ಬಗ್ಗೆ ಕಾರ್ಯಕ್ರಮಗಳನ್ನು ಬಿತ್ತರಿಸಿದಾಗ, ಕೆಲವರಲ್ಲಿ ಭಯ, ಕೆಲವರಲ್ಲಿ ಆತಂಕ ಮತ್ತು ಅನೇಕರಲ್ಲಿ ಪ್ರಶ್ನೆಗಳು ಎದ್ದವು. ಆ ಘಟ್ಟ ಮುಗಿದುಹೋಗಿರುವಂತೆ ತೋರುತ್ತದೆ. ಹೊಸ ಭಾವೋದ್ರಿಕ್ತ ಕಥೆಗಳು ಟಿವಿ ಚಾನಲ್‌ಗಳನ್ನು ಆಕ್ರಮಿಸಿಕೊಂಡವು ಮತ್ತು ಹೊಸ ಸಿನಿಮಾಗಳು ಬಂದವು!

ನಾವು ಯಾವಾಗಲೂ ಭಯಭೀತರಾಗಿರಬೇಕು ಎಂದು ನಾನು ಹೇಳುತ್ತಿಲ್ಲ. ನಮ್ಮನ್ನು ನಾವು ಶಾಂತತೆಯಿಂದ ಮತ್ತು ಒಂದೇ ಸಮನೆ ಸಿದ್ಧಗೊಳಿಸಿಕೊಳ್ಳಬೇಕು. ಹೊಸ ಜ್ಞಾನವನ್ನು ಮೈಗೂಡಿಸಿಕೊಳ್ಳಬೇಕು, ಹೊಸ ಚೈತನ್ಯಗಳನ್ನು ಸ್ವೀಕರಿಸಬೇಕು ಮತ್ತು ನಾವು ಪ್ರೀತಿ, ಒಳ್ಳೆಯತನ ಮತ್ತು ವೈರಾಗ್ಯಗಳೊಂದಿಗೆ 2012ರ ನಂತರದ ಹೊಸ ಯುಗವನ್ನು ಪ್ರವೇಶಿಸಲು ಸಿದ್ಧರಾಗಬೇಕು.

ಇಷ್ಟು ದೊಡ್ಡ ಬದಲಾವಣೆಗೆ, ಇಷ್ಟೊಂದು ಅಲ್ಪ ಸಮಯ ನಮಗೆ ಎಂದೂ ಇರಲಿಲ್ಲ.

ಸಿದ್ಧಿಗಳಿಂದ ಶಕ್ತಿ ಅಥವಾ ನೀತಿ ಮಾರ್ಗ?

ನಾನು ಹೇಳುತ್ತೇನೆ, ಶಕ್ತಿ ಇರಲಿ ಅಥವಾ ಇಲ್ಲದಿರಲಿ, ನೀತಿ ಇರಬೇಕು. ನೀತಿ ಇಲ್ಲದ ಶಕ್ತಿ ಒಳ್ಳೆಯದಲ್ಲ. ಶಕ್ತಿಗಳನ್ನು ಗಳಿಸುವುದು ಕಷ್ಟವೇನಲ್ಲ. ಯಾರುಬೇಕಾದರೂ ಗಳಿಸಬಹುದು. ಆದರೆ ಒಳ್ಳೆಯವರಾಗಿರುವುದು, ಶುದ್ಧ ಮತ್ತು ಪ್ರಾಮಾಣಿಕರಾಗಿರುವುದು ಸುಲಭವಲ್ಲ.

ನಾನು ಅನೇಕ ಬಾರಿ ಇದರ ಬಗ್ಗೆ ಮಾತನಾಡಿದ್ದೇನೆ ಮತ್ತು ಬರೆದಿದ್ದೇನೆ. ನಾನು ಸಿದ್ಧಿಗಳನ್ನು ಹೊಂದಿರುವ ಜನರನ್ನು ಭೇಟಿಮಾಡಿದ್ದೇನೆ. ಅವರು ಅನೀತಿವಂತರಾಗಿ ವರ್ತಿಸಿದಾಗ, ನಾನು ಅವರ ಶೀಘ್ರ ಮತ್ತು ನಿಶ್ಚಿತ ಪತನವನ್ನು ನೋಡಿದ್ದೇನೆ. ಒಳ್ಳೆಯವರಾಗಿರುವುದು ಅಧ್ಯಾತ್ಮಿಕತೆ ಎಂದು ನಾನು ಸಾವಿರಾರು ಬಾರಿ ಹೇಳಿದ್ದೇನೆ. ಒಬ್ಬ ವ್ಯಕ್ತಿ ಯಾವುದೇ ರೀತಿಯ ಸಿದ್ಧಿ ಹೊಂದಿರಬೇಕಾಗಿಲ್ಲ. ಒಳ್ಳೆಯವನಾಗಿದ್ದರೆ ಸಾಕು; ಕೇವಲ ಒಳ್ಳೆಯವನಾಗಿದ್ದರೆ, ನೂರಕ್ಕೆ ನೂರರಷ್ಟು ಒಳ್ಳೆಯವನಾಗಿದ್ದರೆ, ಸಾಕು. ವಿಶ್ವದಲ್ಲಿರುವ ಎಲ್ಲ ಶಕ್ತಿಗಳು ಅವನನ್ನು ರಕ್ಷಿಸುತ್ತವೆ ಮತ್ತು ಅವನನ್ನು ಬೆಂಬಲಿಸುತ್ತವೆ.

2008 ಮೇ 18ರಂದು ಲೈಟ್ ಚಾನಲ್ಸ್ ವಿಶ್ವ ಸಂಚಲನ ಪ್ರಾರಂಭವಾಯಿತು. 2009 ಫೆಬ್ರವರಿ 26ರಂದು ಒಂದು ದೊಡ್ಡ ಸಮಾರಂಭವನ್ನು ಆಯೋಜಿಸಲಾಗಿತ್ತು. ಅದೇ ಸಮಯದಲ್ಲಿ ಪ್ರಪಂಚಾದ್ಯಂತ ಸಾವಿರಾರು ಜನರು ಬೆಳಕನ್ನು ಚಾನಲ್ ಮಾಡಿದರು. ಈಗ, ವಾಲಂಟಿಯರ್‌ಗಳ ಒಂದು ತಂಡ ಮತ್ತು ಅವರೊಂದಿಗೆ ಅನೇಕರು ಸೇರಿ, ಶಾಲೆಗಳನ್ನು ಸಂಪರ್ಕಿಸಿ, ಮಕ್ಕಳು ಬೆಳಕನ್ನು ಚಾನಲ್ ಮಾಡಲು ಸಹಾಯ ಮಾಡುತ್ತಿದ್ದಾರೆ. ಈ ವರ್ಷದಲ್ಲಿ, 70000ಕ್ಕೂ ಹೆಚ್ಚು ಮಕ್ಕಳು ಬೆಳಕನ್ನು ಚಾನಲ್ ಮಾಡಿದ್ದಾರೆ.

ಮೌನವಾಗಿ ಬೆಳಕನ್ನು ಹರಡುತ್ತಿರುವ ಕಾರ್ಯ, ಈ ಭೂಮಿಯನ್ನು ಮೌನವಾಗಿ ಬೆಳಕಿನ ಯುಗದತ್ತ ಕರೆದೊಯ್ಯುತ್ತಿದೆ.■

ಮಾನಸ ಫೌಂಡೇಶನ್ (ರಿ)
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ 560 077. ಭಾರತ.
✆ (080) 2846 5280, 2271 5501, 93420 30250 (ಬೆಳಗ್ಗೆ 10ರಿಂದ ಮಧ್ಯಾಹ್ನ 1)
ಇ-ಮೇಲ್: info@lightagemasters.com ವೆಬ್-ಸೈಟ್: www.lightagemasters.com

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ** (ಬೆಳಿಗ್ಗೆ 10 ರಿಂದ 11 ಘಂ.)

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

ಡಿಸ್ನಿ ಕಿಡ್ಸ್ ಮಾಂಟೆಸರಿ ಸ್ಕೂಲ್
6ನೇ ಕ್ರಾಸ್, ಜ್ಯೋತಿನಗರ,
ಚಂದ್ರಾ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫ್ಲೇಸ್,
ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್,
ಇಂದಿರಾನಗರ

ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ

ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ
ಬನಶಂಕರಿ 2ನೆಯ ಸ್ಟೇಜ್

**ಶುಕ್ರವಾರ** (ಸಂಜೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ
6ನೆಯ ಬ್ಲಾಕ್, ಕೋರಮಂಗಲ

**ಶನಿವಾರ** (ಸಂಜೆ 7 ರಿಂದ 8 ಘಂ.)
ಹಿಮಾಂಶು, 4ನೇ ಮುಖ್ಯರಸ್ತೆ,
ಮಲ್ಲೇಶ್ವರಂ

### ಆನೇಕಲ್ಲಿನಲ್ಲಿ (ರಾಜರಾಜೇಶ್ವರಿ ಬಡಾವಣೆ)

**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ-ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ)**
**ಪ್ರಕಾಶ್‌ಮಾರ್ಗ (ಮರಾಠಿ)**
**ವಾರ್ತಾಪತ್ರದ ವಾರ್ಷಿಕ ಚಂದಾ ರೂ.200/-**
**ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.**

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾ ದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.



ಬ್ರಹ್ಮರ್ಷಿ ಪತ್ರೀಜಿಯವರು ತಪೋನಗರದಲ್ಲಿ ಗುರೂಜಿಯವರೊಂದಿಗೆ ಮಾತನಾಡುತ್ತಿರುವುದು

### ಸುದ್ದಿ-ಸೂಚನೆ

- 23-05-2010ರಂದು ಗುರೂಜಿಯವರ ಜನ್ಮದಿನ ಆಚರಣೆಯ ಸಂದರ್ಭದಲ್ಲಿ ನಮ್ಮ ಹೊಸ ಪ್ರಕಟಣೆಗಳಾದ "Channelled Knowledge from the Rishis Vol.II" ಮತ್ತು "Guruji Speaks Part.III" ಪುಸ್ತಕಗಳನ್ನು ಬಿಡುಗಡೆ ಮಾಡಲಾಗುವುದು.
- 01-04-2010 ರಂದು ಪಿರಮಿಡ್ ಆಧ್ಯಾತ್ಮಿಕ ಸಂಸ್ಥೆಯ ಬ್ರಹ್ಮರ್ಷಿ ಸುಭಾಷ್ ಪತ್ರೀಜಿಯವರು ತಮ್ಮ ತಂಡದೊಂದಿಗೆ ಗುರೂಜಿಯವರನ್ನು ಭೇಟಿಯಾಗಲು ತಪೋನಗರಕ್ಕೆ ಬಂದಿದ್ದರು.
- 22-04-2010 ರಂದು ಆಯೋಜಿಸಿರುವ 'ಓರಿಯಂಟೇಶನ್' ಕಾರ್ಯಕ್ರಮಕ್ಕೆ 200ಕ್ಕೂ ಹೆಚ್ಚು ಸಾಧಕರು ಭಾಗವಹಿಸಿದ್ದರು. ಮೊತ್ತಮೊದಲ ಬಾರಿಗೆ ಹೊರರಾಜ್ಯಗಳ ಸಾಧಕರು ತಪೋನಗರದಲ್ಲಿ ಮತ್ತು ವೆಬ್‌ಕಾಸ್ಟ್ ಮೂಲಕ ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

### ಈ ತಿಂಗಳು ತಪೋನಗರದಲ್ಲಿ

| | |
|---|---|
| 08 ಶನಿವಾರ | ಗುರೂಜಿಯವರೊಂದಿಗೆ ಅನೌಪಚಾರಿಕ ಸಭೆ<br>ಬೆಳಿಗ್ಗೆ 11 ರಿಂದ ಮಧ್ಯಾಹ್ನ 1ರವರೆಗೆ |
| 09 ಭಾನುವಾರ | ಮಧ್ಯಾಹ್ನ 2ಕ್ಕೆ ಶಂಬಲ ಗ್ರೂಪ್ ಸಂಧಿಸುತ್ತದೆ |
| 16 ಭಾನುವಾರ | ಮಧ್ಯಾಹ್ನ 2ಕ್ಕೆ ರಾ-ಗ್ರೂಪ್ ಸಂಧಿಸುತ್ತದೆ<br>ಮಧ್ಯಾಹ್ನ 2.30ಕ್ಕೆ ಲೈಟ್ ಚಾನಲ್ಸ್ ಗ್ರೂಪ್ ಸಂಧಿಸುತ್ತದೆ |
| 27 ಗುರುವಾರ | ಬುದ್ಧ ಪೂರ್ಣಿಮಾ ವಿಶೇಷ ಧ್ಯಾನ<br>ಮಧ್ಯಾಹ್ನ 12 ರಿಂದ 1ರವರೆಗೆ |
| 30 ಭಾನುವಾರ | ಅಖಂಡ ಧ್ಯಾನ<br>ಬೆಳಿಗ್ಗೆ 10 ರಿಂದ 1 ರವರೆಗೆ |

**ಗುರೂಜಿಯವರ ಭಾನುವಾರದ ಉಪನ್ಯಾಸಗಳ ನೇರ ಪ್ರಸಾರವು ವೆಬ್‌ನಲ್ಲಿ ಮೆಂಬರ್‌ಗಳಿಗೆ ಲಭ್ಯವಿದೆ. ಇದರ ಮಾಹಿತಿಗಾಗಿ ಇಮೇಲ್ ಮುಖಾಂತರ ಸಂಪರ್ಕಿಸಬಹುದು.**

### ಭಾನುವಾರದ ಪ್ರಸಾದವನ್ನು ಪ್ರಾಯೋಜಿಸಿದವರು

| | |
|---|---|
| 07-3-10 | ಭುವನೇಶ್ವರ್ ದಿವೇಕರ್ ಮತ್ತು ಉಷಾ ಖಿಡ್ಕೆ |
| 14-3-10 | ಚಂದ್ರಕಲಾ ಡಿ., ವಿಕಾಸ್ ಕಾರಂತ್, ಸುದರ್ಶನ್ ಮತ್ತು ಸುಧಾ ರವಿ |
| 21-3-10 | ಫೆರೋಜ಼ಾ ಪಾಂಡೆ, ಅರ್ಜುನ್ ಮತ್ತು ಎ. ಎಸ್. ಪಾಟೀಲ್ |
| 28-3-10 | ಸುನೀತಾ ರಾವ್ |

### ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 06 | ಗುರು | ಕೃಷ್ಣಾಷ್ಟಮಿ |
| 12 | ಬುಧ | ಮಾಸ ಶಿವರಾತ್ರಿ |
| 14 | ಶುಕ್ರ | ಅಮಾವಾಸ್ಯೆ |
| 16 | ಭಾನು | ಅಕ್ಷಯ ತೃತೀಯ |
| 27 | ಗುರು | ಬುದ್ಧ ಪೂರ್ಣಿಮಾ |

### ಗುರೂಜಿಯವರ ಹುಟ್ಟುಹಬ್ಬದ ಸಮಾರಂಭ ಕಾರ್ಯಕ್ರಮ

**23-5-2010, ಭಾನುವಾರ**

| | |
|---|---|
| ಬೆಳಿಗ್ಗೆ 11 ಕ್ಕೆ | ಓಂಕಾರ<br>ಸ್ವಾಗತ ಭಾಷಣ<br>ಭಾಷಣಗಳು<br>ಗುರೂಜಿಯವರ ನುಡಿಗಳು<br>ಪುಸ್ತಕಗಳ ಬಿಡುಗಡೆ<br>ವಿಶೇಷ ಧ್ಯಾನ<br>ಗುರೂಜಿಯವರಿಂದ ಆಶೀರ್ವಾದ |
| ಮಧ್ಯಾಹ್ನ 12.30ಕ್ಕೆ | ಪ್ರಸಾದ |

**ನಮ್ಮ ಪಿನ್‌ಕೋಡ್ 560077ಕ್ಕೆ ಬದಲಾಗಿದೆ. ದಯವಿಟ್ಟು ಇನ್ನು ಮುಂದೆ ವಿಳಾಸದಲ್ಲಿ ಈ ಪಿನ್‌ಕೋಡ್ ಉಪಯೋಗಿಸಿ.**

**ಇನ್ನು ಮುಂದೆ ಗುರೂಜಿಯವರೊಂದಿಗೆ ಅನೌಪಚಾರಿಕ ಸಭೆ ಯನ್ನು ಪ್ರತಿ ತಿಂಗಳು ಎರಡನೇ ಶನಿವಾರಗಳಂದು ಆಯೋಜಿಸಲಾಗಿದೆ.**

ಈ ತಿಂಗಳ ವಾರ್ತಾಪತ್ರಗಳನ್ನು ಪ್ರಾಯೋಜಿಸಿದವರು ಶ್ರೀಮತಿ ಗೀತಾ ದಿವೇಕರ್ ಮತ್ತು ಶ್ರೀಮತಿ ಅನ್ನಪೂರ್ಣ ಎಂ. ಎಸ್.

"ತಪೋವಾಣಿ"ಯ ಮುದ್ರಣಕ್ಕೆ ರೂ. 5000 ಮತ್ತು ಭಾನುವಾರದ ಪ್ರಸಾದವನ್ನು ಪ್ರಾಯೋಜಿಸುವುದಕ್ಕೆ ರೂ. 2000.

## ಲೈಟ್ ಚಾನಲ್ ವಿಶ್ವಸಂಚಲನದ ಇತ್ತೀಚಿನ–ಸುದ್ದಿ

- 2010 ಫೆಬ್ರವರಿ 1ರಿಂದ ಈವರೆಗೆ ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರಗಳಲ್ಲಿ, 200ಕ್ಕೂ ಹೆಚ್ಚು ಶಾಲೆಗಳಲ್ಲಿ 70000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಈ ಭೂಮಿಗೆ ಹೆಚ್ಚು ಬೆಳಕು ತರುವುದಕ್ಕಾಗಿ ಬೆಳಕನ್ನು ಚಾನಲ್ ಮಾಡಿದರು.
- ಅನೇಕ ಶಾಲೆಗಳಲ್ಲಿ ಲೈಟ್ ಚಾನಲಿಂಗ್–ಅನ್ನು ಪ್ರತಿದಿನದ ಪ್ರಾರ್ಥನೆಯ ಒಂದು ಅಂಗವಾಗಿ ಮಾಡಿದ್ದಾರೆ.
- 70ಕ್ಕಿಂತ ಹೆಚ್ಚು ವಾಲಂಟಿಯರ್‌ಗಳು, ಹಲವಾರು ಶಾಲೆಗಳಲ್ಲಿ ಲೈಟ್ ಚಾನಲ್ ಸೆಷನ್‌ಗಳನ್ನು ಹಮ್ಮಿಕೊಳ್ಳುವ ಮೂಲಕ, ಬೆಳಕನ್ನು ಹರಡಲು ಮನಃಪೂರ್ವಕವಾಗಿ ಮತ್ತು ನಿಸ್ವಾರ್ಥತೆಯಿಂದ ಕೆಲಸಮಾಡುತ್ತಿದ್ದಾರೆ. ■

## ಮುಂದುವರಿಕೆಯಲ್ಲಿರುವ ಲೈಟ್ ಚಾನಲಿಂಗ್ ಸೆಷನ್‌ಗಳು



ಆರ್ಮಿ ಪಬ್ಲಿಕ್ ಶಾಲೆ,
ಬೆಂಗಳೂರು



ಮರಾಠಾ ಮಂದಿರ್
ಇಂಜಿನಿಯರಿಂಗ್ ಕಾಲೇಜ್, ಬೆಳಗಾಂ

## ತಪೋನಗರ ಡೈರಿ

ಸೀಮಾ ಅಲ್‌ವೇಲ್; ಅನು: ಪಾಂಡುರಂಗ

ಮಾರ್ಚ್ ತಿಂಗಳ ಹೊಸ ಚಂದ್ರ, ಯುಗಾದಿ ಹಬ್ಬದ ಸಂಭ್ರಮವನ್ನು ತಂದಿತು. ತಪೋನಗರದಲ್ಲಿ ಸೇರಿದ್ದ ಧ್ಯಾನಿಗಳು ಯುಗಾದಿ ಪುರುಷನಿಗೆ ಚೈತನ್ಯಗಳನ್ನು ಅರ್ಪಿಸಿದರು. ರಾಮನವಮಿಯಂದು ಕೂಡಾ ಎಲ್ಲರೂ ಸೇರಿ ಧ್ಯಾನ ಮಾಡಿದರು. ರಾ–ಗ್ರೂಪ್ ಮತ್ತು ಶಂಬಲ ಗ್ರೂಪ್ ಧ್ಯಾನಗಳನ್ನು ಆಯೋಜಿಸಲಾಗಿತ್ತು.

ತಪೋನಗರ ನಿವಾಸಿಗಳೆಲ್ಲಾ ಸೇರಿ, ತ್ಯಾಜ್ಯವಸ್ತುಗಳ ವಿಲೇವಾರಿ ಮತ್ತು ಸೆಕ್ಯೂರಿಟಿ ವ್ಯವಸ್ಥೆಯ ಬಗ್ಗೆ ಚರ್ಚೆ ಮಾಡಿದರು. ಈ ಮೊದಲೇ ನಿರ್ಧರಿಸಿದಂತೆ ನಿವಾಸಿಗಳ ಕೂಟ ಮತ್ತು ಗುರೂಜಿಯವರೊಂದಿಗೆ ಅನೌಪಚಾರಿಕ ಮಾತುಕತೆ ಕಾರ್ಯಕ್ರಮಗಳು ನಡೆದವು.

ತಿಂಗಳ ಕೊನೆಯಲ್ಲಿ 'ಪಿರಮಿಡ್ ಸ್ಪಿರಿಚುಯಲ್ ಸೊಸೈಟೀಸ್' ಸಂಸ್ಥಾಪಕರಾದ ಬ್ರಹ್ಮರ್ಷಿ ಸುಭಾಷ್ ಪತ್ರೀಜಿಯವರನ್ನು ಸ್ವಾಗತಿಸುವುದಕ್ಕೆ ಸಿದ್ಧತೆ ನಡೆದಿತ್ತು. ಪತ್ರೀಜಿಯವರು ತಮ್ಮ ಕೆಲವು ಅನುಯಾಯಿಗಳೊಂದಿಗೆ ತಪೋನಗರಕ್ಕೆ ಆಗಮಿಸಿದರು. ಗುರೂಜಿಯವರ ಮತ್ತು ಪತ್ರೀಜಿಯವರ ಭೇಟಿ ಒಂದು ಮಹತ್ವಪೂರ್ಣ ಸಂದರ್ಭವಾಗಿತ್ತು. ಅವರಿಬ್ಬರೂ ಆಧ್ಯಾತ್ಮಿಕ ವಿಷಯಗಳ ಬಗ್ಗೆ ವಿಚಾರ ವಿನಿಮಯಮಾಡಿದರು. ಆಗಮಿಸಿದ್ದ ಸನ್ಮಾನ್ಯ ಅತಿಥಿಗಳ ನಮ್ರತೆ, ಪರಿಶುದ್ಧತೆ, ಸರಳತೆ ಮತ್ತು ದಿವ್ಯತೆಗಳನ್ನು ನೋಡಿ, ಅಲ್ಲಿ ನೆರೆದಿದ್ದವರೆಲ್ಲ ರೋಮಾಂಚನಗೊಂಡರು. ಗುರೂಜಿಯವರ ಗೌರವಾರ್ಥವಾಗಿ, ಪತ್ರೀಜಿಯವರು ಯಾವುದೇ ಪೂರ್ವಸಿದ್ಧತೆಯಿಲ್ಲದೆ ಕೊಳಲನ್ನು ನುಡಿಸಿದರು ಮತ್ತು ಭಜನೆಯ ಕೆಲವು ಸಾಲುಗಳನ್ನು ಮೂರು ಭಾಷೆಗಳಲ್ಲಿ ಹಾಡಿದರು. ತಪೋನಗರದ ವಾಲಂಟಿಯರ್‌ಗಳು ಪತ್ರೀಜಿಯವರಿಂದ ಆಶೀರ್ವಾದ ಪಡೆದರು.

ಅವರೆಲ್ಲರಿಗೂ ತಪೋನಗರ ಮತ್ತು ಅಂತರ್–ಮಾನಸದಲ್ಲಿರುವ ವಿವಿಧ ಧ್ಯಾನ–ಸ್ಥಳಗಳನ್ನು ತೋರಿಸಲಾಯಿತು. ಪತ್ರೀಜಿಯವರ ಅನುಯಾಯಿಗಳಲ್ಲಿ ಒಬ್ಬರು, ಅಮರ ಸಮಾಧಿಯಲ್ಲಿ ಧ್ಯಾನ ಮಾಡಿದಾಗ ತಾವು ಕಂಡ ಕೆಲವು ವಿಶನ್‌ಗಳನ್ನು ನಮ್ಮೊಂದಿಗೆ ಹಂಚಿಕೊಂಡರು.

ಪತ್ರೀಜಿಯವರು ತಮ್ಮ ಪಿರಮಿಡ್ ಧ್ಯಾನ ಕೇಂದ್ರಕ್ಕೆ ಗುರೂಜಿಯವರನ್ನು ಮತ್ತು ಅವರ ಅನುಯಾಯಿಗಳನ್ನು ಆಹ್ವಾನಿಸಿದರು.

ಇಬ್ಬರು ಗುರುಗಳು ವ್ಯಕ್ತಪಡಿಸಿದ ಪರಸ್ಪರ ಮೆಚ್ಚುಗೆ, ಪ್ರೀತಿ ಮತ್ತು ಗೌರವ ಅತ್ಯಂತ ಗಮನಾರ್ಹವಾಗಿತ್ತು. ■

## ಲೈಟ್ ಚಾನಲ್ಸ್
### ವಿಶ್ವ ಸಂಚಲನ

ಇದೊಂದು ಆತ್ಮಪ್ರಜ್ಞೆಯಲ್ಲಿ ನಡೆಯುವ ಸಂಚಲನ. ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವ ಸಂಚಲನ. ಇಲ್ಲಿ ಭಾಷಣಗಳು, ಬಾವುಟಗಳಿಲ್ಲ. ಇಲ್ಲಿ ಬೆಳಕನ್ನು ಮೇಲಿನಿಂದ ತಂದು ಸುತ್ತಲೂ ಹರಡಿದರೆ ಅಷ್ಟೇ ಸಾಕು. ಉಳಿದ ಎಲ್ಲ ಕೆಲಸವನ್ನೂ ಬೆಳಕೇ ಮಾಡುತ್ತದೆ.

ನಾವು ಬೆಳಕನ್ನು ತಂದು ಹರಡಿದಾಗ, ಅದು ಬೇರೆಯವರ ಹೃದಯಗಳು ಮನೆಗಳನ್ನು ತುಂಬಿ, ಅವರ ಭಾವನೆ–ವಿಚಾರಗಳಲ್ಲಿರುವ ಕತ್ತಲನ್ನು ಬೆಳಕನ್ನಾಗಿ ಪರಿವರ್ತಿಸುತ್ತದೆ. ಆಗ ವ್ಯಕ್ತಿಗಳಲ್ಲಿ ಪರಿವರ್ತನೆ ಯುಂಟಾಗುತ್ತದೆ. ವ್ಯಕ್ತಿಗಳಿಂದ ಪ್ರಪಂಚ ಪರಿವರ್ತಿತವಾಗುತ್ತದೆ. ಪ್ರಪಂಚದಲ್ಲಿ ಬೆಳಕು ತುಂಬುತ್ತದೆ.

ಈ ಬೆಳಕು ಸಾಧಾರಣ ಬೆಳಕಲ್ಲ. ಯಾವ ಬೆಳಕಿನಿಂದ ಇಡೀ ಸೃಷ್ಟಿ ಬಂದಿದೆಯೋ ಆ ಮೂಲ ಬೆಳಕು. ಈ ಬೆಳಕಿನಲ್ಲಿ ಎಲ್ಲಾ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ. ಆದರೆ ಎಲ್ಲಾ ಕಡೆ ಇದೆ.

**ನಾವು ಪ್ರತಿದಿನ ಏಳುವಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ತಂದು ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.**

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಬೇರೆಯವರಿಗೆ ಹರಡಿ. ಈ ಸಂಚಲನವನ್ನು ಬೆಳೆಸಿ. ನಮ್ಮ ವೆಬ್‌ಸೈಟ್ www.lightchannels.comಗೆ ಬನ್ನಿ.

### ಶಂಬಲದ ತತ್ವಗಳು

**ಶಂಬಲದ ಈ ಏಳು ತತ್ವಗಳನ್ನು ಪುರಾತನ ಋಷಿಗಳು ಕೊಟ್ಟಿದ್ದಾರೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶಂಬಲದಲ್ಲಿ ವಾಸಿಸುತ್ತಿರುವ ಜನ ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವ್ವನದಲ್ಲಿಯೇ, ಬದುಕಿದ್ದಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ಅನಂತರ ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ಧ್ಯಾನದಿಂದ ದೇಹ, ಮನಸ್ಸು ಮತ್ತು ಬುದ್ಧಿಗಳ ಶಕ್ತಿಗಳನ್ನು ಒಟ್ಟುಮಾಡಿ ಅರಿಷಡ್ವರ್ಗವನ್ನು ಗೆಲ್ಲುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡಬೇಕು.

## ಗುರೂಜಿಯವರ ನುಡಿಗಳು

(ಗುರೂಜಿಯವರ ಭಾನುವಾರದ ಉಪನ್ಯಾಸಗಳ ಸಂಗ್ರಹ)

(ಸಂಗ್ರಹ: ಶೋಭಾ ಕೆ. ರಾವ್; ಅನುವಾದ: ಶಿವಪ್ರಕಾಶ್ ಎಲ್)

**14–03–2010**

ಒಬ್ಬ ವ್ಯಕ್ತಿ ನನಗೆ ಇ–ಮೇಲ್ ಕಳುಹಿಸಿ ಬದುಕುವ ಬಗೆಯನ್ನು ಕಲಿಸಿ ಎಂದು ಕೇಳಿದ್ದಾರೆ. ಇದನ್ನು ಸುಲಭವಾಗಿ ಕಲಿಸಲಾಗುವುದಿಲ್ಲ ಎಂಬುದು ನನ್ನ ಅನಿಸಿಕೆ. ಅದರಲ್ಲಿಯೂ ಇ–ಮೇಲ್ ಮುಖಾಂತರ ಖಂಡಿತ ಕಲಿಸಲಾಗುವುದಿಲ್ಲ. ಬದುಕುವುದು ಹೇಗೆಂಬುದನ್ನು ನಾವೇ ಕಲಿಯಬೇಕು. ನಾವು ಪ್ರಾಮಾಣಿಕವಾಗಿ ಸೂಕ್ತ ರೀತಿಯಲ್ಲಿ ಬದುಕಬೇಕೆಂಬ ಉದ್ದೇಶ ಹೊಂದಿದ್ದರೆ ಮಾರ್ಗಗಳನ್ನು ಕಂಡುಕೊಳ್ಳುತ್ತೇವೆ. ನಮ್ಮಲ್ಲಿ ಪ್ರಶ್ನೆಗಳಿದ್ದಲ್ಲಿ ನಾವು ಉತ್ತರಗಳನ್ನು ಹುಡುಕುತ್ತೇವೆ. ಉತ್ತರಗಳು ಒಬ್ಬ ಗುರುವಿನ ಮೂಲಕ ಅಥವಾ ಒಂದು ಪುಸ್ತಕದಿಂದ ಅಥವಾ ಕೆಲವರ ಜೊತೆ ಮಾತನಾಡುವುದರಿಂದ ಅಥವಾ ಎಲ್ಲಿಯಾದರೂ ಸಿಗಬಹುದು. ವಿಶ್ವವು ನಮಗೆ ತಿಳಿಯಪಡಿಸುವ ಮತ್ತು ಕಲಿಸುವ ನಾನಾ ದಾರಿಗಳನ್ನು ಹೊಂದಿದೆ. ನೀವು ತೆರೆದ ಕಣ್ಣುಗಳು ಮತ್ತು ಕಿವಿಗಳನ್ನು ಹೊಂದಿದ್ದರೆ ಸಾಕು, ವಿಶ್ವ ಸಾವಿರ ರೀತಿಗಳಲ್ಲಿ ಕಲಿಸಲು ಪ್ರಾರಂಭಿಸುತ್ತದೆ. ಋಷಿಗಳ ಕೃಪೆಯಿಂದ ನಮ್ಮಲ್ಲಿ ಅಗಾಧ ಜ್ಞಾನವಿದೆ. ಶಂಬಲದ ಯಾವ ನಿಯಮವನ್ನಾದರೂ ಅಭ್ಯಾಸಮಾಡಿ, ಮೊದಲನೆಯ ನಿಯಮವನ್ನೇ ಅಭ್ಯಾಸ ಮಾಡಬೇಕೆಂಬ ನಿರ್ಬಂಧವೇನಿಲ್ಲ. ಕಲಿಯಲು, ಬದುಕಲು ಮತ್ತು ಆಯ್ಕೆ ಮಾಡಿಕೊಳ್ಳಲು ಬೇಕಾದಷ್ಟು ವಿಷಯಗಳಿವೆ. ಅದು ನಮ್ಮ ಮೇಲೆ ಅವಲಂಬಿಸಿದೆ.

ಧ್ಯಾನಗಳು ಮತ್ತು ಸಕಾರಾತ್ಮಕವಾಗುವುದನ್ನು ಹೊರತುಪಡಿಸಿ, ಒಬ್ಬ ಗಂಭೀರ ಸಾಧಕ ನಿಜವಾಗಲೂ ಶಾಂತಿ, ಸುಖ ಮತ್ತು ತೃಪ್ತನಾಗಿರಬೇಕೆಂದು ಬಯಸಿದರೆ ಯಾವ ಬಣ್ಣದ್ದೆ ಆಗಲಿ, ಯಾವಾಗಲೂ ಬೆಳಕನ್ನು ಹೊಂದಿರಬೇಕು ಮತ್ತು ಅದರ ಅರಿವಿನಲ್ಲಿರಬೇಕು, ಅದರೊಂದಿಗೆ ಸಂಪರ್ಕಿಸಬೇಕು ಮತ್ತು ಪ್ರತಿಕ್ರಿಯಿಸಬೇಕು. ನೀವು ಬೆಳಕನ್ನು ಯಾವಾಗಲೂ ಹೊಂದಿದ್ದರೆ, ಬೆಳಕು ನಿಮ್ಮ ಬದುಕಿನ ಜವಾಬ್ದಾರಿಯನ್ನು ತೆಗೆದು ಕೊಳ್ಳುತ್ತದೆ. ಅದಕ್ಕೆ ನೀವು ಅವಕಾಶ ಮಾಡಿಕೊಡಬೇಕು. ಬೆಳಕು ಒಂದು ಸ್ವತಂತ್ರವಾದ ಅಸ್ತಿತ್ವ. ಅದು ದೇವರು. ಬೆಳಕು ಪರಮೋನ್ನತ ಗುರು, ಅತ್ಯುನ್ನತ ಒಡನಾಡಿ. ಕಣ್ಣು ಮುಚ್ಚಿಕೊಂಡು ನಂಬಬಹುದಾದ ಅತ್ಯುತ್ತಮ ಸ್ನೇಹಿತ. ಅತ್ಯಗತ್ಯವಾಗಿ ಬೇಕಾಗಿರುವುದು ಪ್ರೇಮ. ಬೆಳಕಿನ ಅರಿವು ನಿಮ್ಮಲ್ಲಿರಲಿ ಮತ್ತು ಬೆಳಕನ್ನು ಪ್ರೀತಿಸಿ.

ಶಕ್ತಿಗಳು ವಿವೇಕವನ್ನು ಹೊಂದಿರುವುದಿಲ್ಲ. ನಾವು ಅನೇಕ ಮಂತ್ರ–ತಂತ್ರ ಶಕ್ತಿಯುಳ್ಳ ಜನರ ಬಗ್ಗೆ ಕೇಳಿದ್ದೇವೆ. ಅವರ ಬಗ್ಗೆ ಗೌರವ ತೋರಿಸೋಣ ಆದರೆ ಅವರಿಂದ ದೂರವಿರೋಣ, ಕಾರಣ ಅವರು ಆಧ್ಯಾತ್ಮಿಕವಾಗಿ ಮಾರ್ಗದರ್ಶನ ಮಾಡಲಾರರು. ಅವರು ನಮ್ಮನ್ನು ಉನ್ನತ ಹಂತಕ್ಕೇರಿಸುವ ಬದಲು ಕೆಳಗೆ ತಳ್ಳುವರು. ಅವರ ಬಗ್ಗೆ ನಾವು ಎಚ್ಚರವಾಗಿರುವುದು ಒಳ್ಳೆಯದು.

ನಿಮ್ಮ ಆಧ್ಯಾತ್ಮಿಕ ಪ್ರಗತಿ ನಮಗೆ ಬಹಳ ಮುಖ್ಯ. ನೀವು ಸಾಧನೆಯಲ್ಲಿ ಮುಂದುವರಿಯುತ್ತಿದ್ದೀರಿ. ಆದರೆ ಅದು ಸಾಲದು. ನಾವು ಧ್ಯಾನಿಸಿದಾಗ ಮತ್ತು ದೈವಿಕತೆಯನ್ನು ವ್ಯಕ್ತಪಡಿಸಿದಾಗ, ವಿಶ್ವದ ಕೇಂದ್ರದೊಡನೆ ಅಥವಾ ದೈವದೊಂದಿಗೆ ನಾವು ಶ್ರುತಿಗೊಳ್ಳುತ್ತೇವೆ. ನಾವು ದೈವದೊಡನೆ ಶ್ರುತಿಗೊಂಡಾಗ ತಪ್ಪುಗಳನ್ನು ಮಾಡುವುದಿಲ್ಲ. ನಾವು ಒಮ್ಮೆ ಬೆಳಕನ್ನು ಹೊಂದಿದರೆ ಮತ್ತು ಪ್ರೇಮವನ್ನು ತೋರಿಸಿದರೆ, ನಾವು ಈ ಪ್ರಾಪಂಚಿಕ ವ್ಯವಹಾರಗಳಲ್ಲಿ ಎಷ್ಟೇ ಮುಳುಗಿದ್ದರೂ ಬೆಳಕು ನಮ್ಮೊಳಗಿನಿಂದ ಹರಿಯುತ್ತಿರುತ್ತದೆ. ನೀವು ಒಬ್ಬರೇ ಇರುವಾಗ ನಿಮ್ಮ ಅಂತರಂಗದಿಂದ ಹರಿಯುತ್ತಿರುವ ಈ ಪ್ರೇಮದ ಬಗ್ಗೆ ನಿಮಗೆ ಅರಿವಿರಲಿ. ದೈವಿಕತೆಯನ್ನು ವ್ಯಕ್ತಪಡಿಸದಿದ್ದರೆ, ಪರಿವರ್ತನೆಯಾಗುವುದಿಲ್ಲ.

ಜನರು ತಮ್ಮನ್ನು ತಾವು ತಿದ್ದಿಕೊಳ್ಳಲು ತಮ್ಮ ತಪ್ಪುಗಳನ್ನು ತೋರಿಸಿಕೊಡುವಂತೆ ಕಾಳಜಿಯಿಂದ ನನ್ನನ್ನು ಕೇಳುತ್ತಾರೆ. ಆದರೆ ಅವರ ತಪ್ಪುಗಳನ್ನು ತೋರಿಸಿಕೊಡಲು ನಾನು ಬಯಸುವುದಿಲ್ಲ. ಸಾಧಕರಾಗಿ ನಾವು ಯಾವಾಗಲೂ ವಿಚಾರ ವಿನಿಮಯ ಮಾಡಿಕೊಳ್ಳಬೇಕು. ನೀವು ಪ್ರಾಮಾಣಿಕವಾಗಿ ಸುಧಾರಣೆಯಾಗಬೇಕಾದರೆ, ನೀವೇ ನಿಮ್ಮನ್ನು ಪ್ರಜ್ಞಾಪೂರ್ವಕವಾಗಿ ತಿದ್ದಿಕೊಳ್ಳಬೇಕು.

ಅ–ಪ್ರೇಮವು ನಮ್ಮನ್ನು ಕಬಳಿಸುತ್ತದೆ ಹಾಗೂ ನಾಶಗೊಳಿಸುತ್ತದೆ. ನಾವು ಪ್ರಜ್ಞಾಪೂರ್ವಕವಾಗಿ ಅ–ಪ್ರೇಮವನ್ನು ಆಯ್ಕೆ ಮಾಡಿಕೊಳ್ಳಬಾರದು. ನಾವು ಪ್ರಜ್ಞಾಪೂರ್ವಕವಾಗಿ ಅದನ್ನು ಹೊರ ಹಾಕಬೇಕು. ನಾವು ಅ–ಪ್ರೇಮವನ್ನು ಲವಲೇಶ ಹೊಂದಿದ್ದರೂ ಅದು ನಮ್ಮನ್ನು ಅವನತಿಗೆ ಗುರಿ ಮಾಡುತ್ತದೆ.

ವೈಯಕ್ತಿಕ, ಜಾಗತಿಕ, ಉನ್ನತ ಮಟ್ಟಗಳಲ್ಲಿ ನಾವು ಸತ್ಯಗಳು ಕಾಣಿಸಿಕೊಳ್ಳುವುದನ್ನು ನೋಡುತ್ತೇವೆ. ಅದು ಒಳ್ಳೆಯದಾಗಿರಬಹುದು ಅಥವಾ ಕೆಟ್ಟದಾಗಿರಬಹುದು. ಶುದ್ಧಗೊಳಿಸುವ ಪ್ರಕ್ರಿಯೆ ಪ್ರಾರಂಭವಾಗಿದೆ. ಋಷಿಗಳು ಕೆಳತಂದಿರುವ ಹೊಸ ಚೈತನ್ಯಗಳ ಬಗ್ಗೆ ನಾವು ಅರಿವನ್ನು ಹೊಂದಿರಬೇಕು. ನಮ್ಮ ಪ್ರೇಮವನ್ನು ಇಡೀ ಪ್ರಪಂಚಕ್ಕೆ ವಿಸ್ತರಿಸಬೇಕು. ಕೊನೆಯ ಪಕ್ಷ ನಮ್ಮ ಸುತ್ತಮುತ್ತಲಿರುವ, ನಮಗೆ ತಿಳಿದಿರುವ ಜನರಿಗೆ ಈ ಪ್ರೇಮವನ್ನು ವಿಸ್ತರಿಸಬೇಕು. ನಾವು ಪ್ರಪಂಚವನ್ನು ಒಪ್ಪಿಕೊಳ್ಳಬೇಕು ಮತ್ತು ಪ್ರೀತಿಸಬೇಕು. ಸುಧಾರಿಸಲು ನಾವು ಶಕ್ತಿ ಮೀರಿ ಪ್ರಯತ್ನಿಸುತ್ತೇವೆ. ನಾವು ಯಾವುದನ್ನೂ ತೀರ್ಮಾನಿಸುವುದಿಲ್ಲ ಅಥವಾ ಕೀಳಾಗಿ ನೋಡುವುದಿಲ್ಲ. ಆಗ ನಾವು ಪ್ರೇಮವನ್ನು ವ್ಯಕ್ತಪಡಿಸಬಹುದು. ಪ್ರಪಂಚದಲ್ಲಿನ ಬದುಕು ಬದಲಾಗಬೇಕು ಮತ್ತು ಬೆಳಕಿನ ಯುಗಕ್ಕೆ ಪ್ರವೇಶಿಸಬೇಕು. ಋಷಿಗಳು ನಮ್ಮೊಡನೆ ಇರಬಯಸಿದ್ದು, ಈ ಭೂಮಿಯನ್ನು ಸತ್ಯಯುಗಕ್ಕೆ ಪ್ರವೇಶ ಮಾಡಿಸುವುದಕ್ಕೆ. ಈ ಕಾರ್ಯದಲ್ಲಿ ನಾವು ಅವರಿಗೆ ಸಹಾಯ ಮಾಡಬೇಕು.

**21–03–2010**

ಒಬ್ಬ ವ್ಯಕ್ತಿ ದೇಶ–ವಿದೇಶಗಳಿಗೆ ಪ್ರವಾಸ ಹೋಗುವುದು ಆಧ್ಯಾತ್ಮಿಕವಾಗಿ ಸರಿಯೇ ಎಂದು ಪ್ರಶ್ನೆ ಕೇಳಿದರು. ನಾವು ನಮ್ಮ ಅಂತರ್–ಗ್ರಹಣ–ಶಕ್ತಿ ಅಥವಾ ನಮ್ಮ ವಿವೇಕಕ್ಕೆ ಕೇಳಬೇಕು. ಹೀಗೆ ಮಾಡುವುದರಿಂದ ನಾವು ಬೆಳೆಯುತ್ತೇವೆ ಮತ್ತು ಆತ್ಮವಿಶ್ವಾಸ ಪಡೆಯುತ್ತೇವೆ. ನಾವು ಪ್ರಯಾಣ ಮಾಡಿದಾಗ ಹೊಸ ಅನುಭವಗಳು ಮತ್ತು ಹೊಸ ಚೈತನ್ಯಗಳನ್ನು ಪಡೆಯುತ್ತೇವೆ. ಧ್ಯಾನವೊಂದೇ ಆಧ್ಯಾತ್ಮಿಕ ಚಟುವಟಿಕೆ ಮತ್ತು ಅದೊಂದೇ ನಮ್ಮನ್ನು ಪರಿವರ್ತಿಸುತ್ತದೆ ಎಂಬ ತಪ್ಪು ತಿಳುವಳಿಕೆ ನಮ್ಮಲ್ಲಿ ಇದೆ. ಆದರೆ ಬಹಳ ಮುಖ್ಯವಾದ ವಿಷಯವೆಂದರೆ ಕಲಿತಿರುವುದನ್ನು ತೊರೆಯುವುದು. ಅ–ಪ್ರೇಮವನ್ನು ಹೊಂದಿರುವುದು ಸುಲಭ. ಆದರೆ ಅದನ್ನು ಹೋಗಲಾಡಿಸಿಕೊಳ್ಳಲು ನಾವು ಪ್ರಯತ್ನಿಸುವುದಿಲ್ಲ.

ಒಬ್ಬ ವ್ಯಕ್ತಿ ತಮ್ಮ ಬದುಕಿನ ಯಾವುದೋ ಮಹತ್ವದ ಘಟನೆಯ ಸಂಬಂಧವನ್ನು ಸೂಚಿಸಿ ಅದರ ನಿಮಿತ್ತ ಮಳೆ ಬಂತೆಂಬ ವಿಷಯವನ್ನು ನನಗೆ ಹೇಳಿದರು. ಆದರೆ ಅವರ ಆಲೋಚನೆ ಸರಿಯೇ ಅಥವಾ ತಪ್ಪೇ ಎಂಬುದನ್ನು ಖಚಿತ ಪಡಿಸುವಂತೆ ಕೇಳಿದರು. ನಮ್ಮ ಸುತ್ತಮುತ್ತಲಿರುವ ವಿಷಯಗಳನ್ನು ಅಗತ್ಯಕ್ಕಿಂತ ಹೆಚ್ಚಾಗಿ ವ್ಯಾಖ್ಯಾನಿಸುತ್ತೇವೆ. ಮಳೆಯಾದರೆ, ಅದು ಪ್ರಪಂಚಕ್ಕಾಗಿ, ಎಲ್ಲರಿಗಾಗಿ.

ಧ್ಯಾನದಲ್ಲಿ ನಿಶ್ಚಲತೆ ನಮ್ಮ ಶರೀರದಿಂದ ಪ್ರಾರಂಭವಾಗುತ್ತದೆ. ಅದನ್ನು ಸ್ಥಿರವಾಗಿಡಬೇಕು ಮತ್ತು ವಿಶ್ರಮಿಸಬೇಕು. ಮನಸ್ಸು ಭಾವೋದ್ವೇಗ ರಹಿತವಾದಾಗ ನಿಶ್ಚಲತೆ ಮನಸ್ಸನ್ನು ಪ್ರವೇಶಿಸುತ್ತದೆ. ಅದು ಮುಂದಿನ ಹಂತ. ನಾವು ಆಲೋಚನೆಗಳನ್ನು ಅಲಕ್ಷಿಸಿದಾಗ, ಬುದ್ಧಿ ಅಲೋಚನೆಗಳಿಂದ ಮುಕ್ತವಾಗುವುದು. ಆಗ ನಿಶ್ಚಲತೆ ಬುದ್ಧಿಯನ್ನು ಪ್ರವೇಶಿಸುತ್ತದೆ. ಹೀಗೆ ಧ್ಯಾನ ಅರಳುತ್ತದೆ. ನಂತರ ಅರಿವು ನಿಶ್ಚಲತೆಯ ಇನ್ನೊಂದು ಆಯಾಮವಾದ ಅಂತರಾಳವನ್ನು ಪ್ರವೇಶಿಸುತ್ತದೆ. ಅಲ್ಲಿ ನಮ್ಮ ಅರಿವು ವಿಸ್ತರಿಸುತ್ತದೆ ಮತ್ತು ಅದು ಆ ವಿಸ್ತಾರದಲ್ಲಿ ಕನಿಷ್ಠ 48 ನಿಮಿಷಗಳವರೆಗೆ ಇರುತ್ತದೆ. ಹೀಗೆ ವಿಸ್ತಾರವಾಗುವ ಸ್ಥಿತಿಯೇ ಸಮಾಧಿ. ನಮ್ಮ ಅರಿವು ಆ ಸ್ಥಿತಿಯಲ್ಲಿ ದೀರ್ಘಕಾಲದವರೆಗೆ ಉಳಿದರೆ ನಾವು ದೈವದೊಂದಿಗೆ ಒಂದು ರೀತಿಯ ಸಂಬಂಧ ಸ್ಥಾಪಿಸುತ್ತೇವೆ. ದೈವವನ್ನು ಅನುಭವಿಸುತ್ತೇವೆ. ಇಂಥ ಅನುಭವವನ್ನು ವರ್ಣಿಸಲು ಪದಗಳಿಲ್ಲ. ಧ್ಯಾನಾಭ್ಯಾಸಕ್ಕಿಂತ ಮುಖ್ಯವಾದ ಅಂಶವೆಂದರೆ ಪ್ರೀತಿಯನ್ನು ಹೊಂದಿರುವುದು. ಪ್ರೀತಿ ಇಲ್ಲವಾದಲ್ಲಿ ಯೋಗ ಸಂಭವಿಸುವುದಿಲ್ಲ.

## ಗುರೂಜಿಯವರ ನುಡಿಗಳು

**(ಗುರೂಜಿಯವರ ಭಾನುವಾರದ ಉಪನ್ಯಾಸಗಳ ಸಂಗ್ರಹ)**

**(ಸಂಗ್ರಹ: ಶೋಭಾ ಕೆ. ರಾವ್; ಅನುವಾದ: ಶಿವಪ್ರಕಾಶ್ ಎಲ್)**

ಮಾನಸದಲ್ಲಿ ಅವಕಾಶಗಳಿವೆ–ನಾವು ಧ್ಯಾನವನ್ನು ಕಲಿಯುಬಹುದು, ಶಾಂತಿಯಿಂದ ಇರುವುದನ್ನು ಕಲಿಯುಬಹುದು ಮತ್ತು ಜ್ಞಾನೋದಯವನ್ನು ಪಡೆಯಬಹುದು. ನಮ್ಮ ಭೌತಿಕ ಶರೀರವನ್ನು ಬೆಳಕಿನ ಶರೀರವನ್ನಾಗಿ ಪರಿವರ್ತಿಸಬಹುದು. ನಾವು ಶಂಬಲದ ನಾಗರಿಕರಾಗಬಹುದು. ಒಬ್ಬ ಸಾಧಕ ಋಷಿಯಾಗಬಹುದು, ಆದರೆ ಇದಕ್ಕೆ ಧೀರ್ಘಕಾಲದ ಅವಧಿ ಅತ್ಯಗತ್ಯ. ನಾವು ಚಾನಲ್‌ಗಳಾಗಬಹುದು ಮತ್ತು ಜ್ಞಾನವನ್ನು ಚಾನಲ್ ಮಾಡಬಹುದು. ಇವೆಲ್ಲವನ್ನು ಸಾಧಿಸುವುದು ಸುಲಭವಲ್ಲ. ಇವು ಒಂದೊಂದೂ, ಒಂದು ಜೀವಮಾನದ ಸಾಧನೆ. ಒಂದು ಅಥವಾ ಎರಡನ್ನು ಕೈಗೆತ್ತಿಕೊಂಡು ಅವುಗಳನ್ನು ಸಾಧಿಸಲು ಕೆಲಸಮಾಡಿ. ಇದು ಸಾಧ್ಯ.

ಸಾಧನೆಗಿಂತ ಕೆಲಸ ದೊಡ್ಡದು. ಕೆಲಸವೇ ಸಾಧನೆ. ಆದರೆ ನೀವು ಸಾಧನೆಯನ್ನು ಕಡೆಗಣಿಸುವಂತಿಲ್ಲ. ನಾವು ಆಯ್ಕೆಮಾಡಿ, ಕೈಗೆತ್ತಿಕೊಳ್ಳುವ ಕೆಲಸ, ಹೆಚ್ಚುವರಿಯಾದ ಕೆಲಸ. ಸಾಧನೆಯ ಜೊತೆ ಮಾಡುವ ಕೆಲಸ.

ಒಳ್ಳೆಯ ಮತ್ತು ಕೆಟ್ಟ ವಿಷಯಗಳು ನಮ್ಮಲ್ಲಿ, ಹೊರ ಪ್ರಪಂಚದಲ್ಲಿ, ಎಲ್ಲ ಕ್ಷೇತ್ರಗಳಲ್ಲಿ ಕಾಣಿಸಿಕೊಳ್ಳುವುದನ್ನು ನೀವು ನೋಡಬಹುದು. ಇವುಗಳನ್ನು ನಾವು ನಿಭಾಯಿಸದೇ ಹೋದರೆ, ವಿಶ್ವ ಅವುಗಳನ್ನು ನಿಭಾಯಿಸುತ್ತದೆ. ಆಗ ಎಲ್ಲೆಲ್ಲೂ ನಾಶ ಮತ್ತು ನೋವು. ಅಂಥ ಒಂದು ಹಂತವನ್ನು ನಾವು 2012ರಲ್ಲಿ ತಲುಪುತ್ತೇವೆ.

‘ತಪೋನಗರದ ಜನರು ಬೇರೆ ಕಡೆ ಇರುವ ಜನರಿಗಿಂತ ಭಿನ್ನರಲ್ಲ’ ಎಂಬುದು ಒಬ್ಬ ವ್ಯಕ್ತಿಯಿಂದ ಬಂದ ಟೀಕೆ. ಜನರು ತಪೋನಗರದಲ್ಲಿ ವಾಸಿಸುತ್ತಿದ್ದಾರೆ, ಆದರೆ ತಪೋನಗರ ಅವರಲ್ಲಿ ವಾಸಿಸಲು ಅವರು ಇನ್ನೂ ಅವಕಾಶ ಕೊಟ್ಟಿಲ್ಲ. ಅದಕ್ಕೆ ಇನ್ನೂ ಸಮಯ ಬೇಕಾಗಿದೆ. ತಪೋನಗರದಲ್ಲಿರುವ ಜನರು ಈ ಪ್ರಪಂಚದ ಒಂದು ಭಾಗ, ಸಹಜವಾಗಿಯೇ ಅವರು ಬೇರೆ ಎಲ್ಲರಂತೆ ಇದ್ದಾರೆ.

ನಾವು ‘ಕಮ್ಯೂನ್’ಅನ್ನು ಪ್ರಾರಂಭಿಸಬೇಕು. ಇದು ನಮ್ಮ ಕನಸು. ನನ್ನ ‘ಕಮ್ಯೂನ್’ ಈಗಾಗಲೇ ಬೇರೆ ವಲಯದಲ್ಲಿ ಅಸ್ತಿತ್ವದಲ್ಲಿದೆ. ಯಾರು ಎಲ್ಲ ಸಮಯದಲ್ಲೂ ಹಸನ್ಮುಖಿಯಾಗಿರುತ್ತಾರೋ, ಅವರು ನನ್ನ ಕಮ್ಯೂನ್‌ಗೆ ಸೇರಿರುತ್ತಾರೆ. ಒಬ್ಬ ವ್ಯಕ್ತಿ ಹಸನ್ಮುಖಿಯಾಗಿದ್ದರೆ, ನೆಮ್ಮದಿಯಿಂದ ಇದ್ದರೆ, ಒಳ್ಳೆಯ ಮತ್ತು ಪ್ರಾಮಾಣಿಕ ಆಗಿದ್ದರೆ, ಅವರು ಮುಂದಿನ ಯುಗ, ಬೆಳಕಿನ ಯುಗದ ಮೊದಲ ಪ್ರಜೆ ಎನಿಸಿಕೊಳ್ಳುತ್ತಾರೆ. ಸೂಕ್ಷ್ಮಮಟ್ಟದಲ್ಲಿ ಇಂಥ ವ್ಯಕ್ತಿಗಳನ್ನು ಪ್ರಕಾಶಮಾನವಾದ ಬೆಳಕುಗಳಾಗಿ ನೋಡುತ್ತೇವೆ. ಋಷಿಗಳು ಇಲ್ಲಿ ಒಂದು ಶಂಬಲವನ್ನು ನಿರ್ಮಿಸಲು ಬಯಸಿದ್ದಾರೆ.

ನೀವು ವಿಶ್ವಾಮಿತ್ರ ಮಹರ್ಷಿಗಳ ಬಗ್ಗೆ ಹೆಚ್ಚು ಚಿಂತಿಸಬೇಕು. ಅವರ ಬಗ್ಗೆ ಅರ್ಥ ಮಾಡಿಕೊಂಡು, ಅವರನ್ನು ಹೆಚ್ಚು ಅನುಭವಿಸಬೇಕು. ಆಗ ನಾವು ಹೆಚ್ಚಿನ ಆಧ್ಯಾತ್ಮಿಕ ಪ್ರಗತಿಯನ್ನು ಸಾಧಿಸುತ್ತೇವೆ. ನಾವು ನುಡಿದಂತೆ ನಡೆಯಲು ಸಾಧ್ಯವಾಗುತ್ತದೆ.

### 28–03–2010

ಈ ದಿನ ಬೆಳಿಗ್ಗೆ ದಿನಪತ್ರಿಕೆಯಲ್ಲಿ ಅಂಧ ವ್ಯಕ್ತಿಯೊಬ್ಬನಿಗೆ ನೀರು ಕುಡಿಯಲು ನಲ್ಲಿ ತಿರುಗಿಸುವುದಕ್ಕೆ ಒಂದು ಕೋತಿ ಸಹಾಯ ಮಾಡುತ್ತಿರುವ ಚಿತ್ರ ನೋಡಿದೆ. ವಿಚಿತ್ರವೆಂದರೆ ನಾವು ಮನುಷ್ಯರು ಪ್ರೇಮದ ವಿವಿಧ ಹಂತಗಳನ್ನು, ಅ–ಪ್ರೇಮವನ್ನು ಹೊಂದಿದ್ದೇವೆ. ಆದರೆ ಪ್ರಾಣಿಗಳು ಮತ್ತು ನಿಸರ್ಗ ಯಾವುದೇ ಷರತ್ತಿಲ್ಲದ, ಅಪಾರ ಮತ್ತು ಅಗಾಧವಾದ ಪ್ರೇಮವನ್ನು ತೋರಿಸುತ್ತವೆ. ವಿಶ್ವದಲ್ಲಿರುವ ಪ್ರೇಮವನ್ನು ನೆನಪಿಸಲು, ನಾವು ಈ ಚಿತ್ರವನ್ನು ಯಾವಾಗಲೂ ಮನಸ್ಸಿನಲ್ಲಿಟ್ಟುಕೊಳ್ಳೋಣ.

ಕಲಿಕೆಯ ವಿವಿಧ ಹಂತಗಳಲ್ಲಿರುವ ಜನರಿಗೆ ಬೇರೆ ಬೇರೆ ಉಪನ್ಯಾಸ ನೀಡಲು ಆಗುವುದಿಲ್ಲ. ಪ್ರಾರಂಭದ ಸಾಧಕರು, ಇಲ್ಲಿ ಸ್ವಲ್ಪ ಹೆಚ್ಚುಕಾಲ ಕಳೆದ ಹಿರಿಯ ಸಾಧಕರು ಮತ್ತು ಸಮಾಧಿ ಯೋಗದಲ್ಲಿರುವ ಜನರು ಈ ಉಪನ್ಯಾಸಗಳನ್ನು ಕೇಳುತ್ತಾರೆ. ಈ ಕಾರಣದಿಂದಾಗಿ ಕೆಲವು ಅಂಶಗಳ ಪುನರಾವರ್ತನೆ ಕಂಡುಬರುತ್ತದೆ.

ಆಧ್ಯಾತ್ಮಿಕತೆ ಧರ್ಮಕ್ಕಿಂತಲೂ ಭಿನ್ನವಾದುದು. ಅದು ಎಲ್ಲ ಧರ್ಮಗಳ ಸಾರ. ಎಲ್ಲ ಧರ್ಮಗಳು ಪ್ರೇಮ, ಕರುಣೆ, ಕ್ಷಮೆ, ವಿಶಾಲ ಮನೋಭಾವಗಳನ್ನು ಕುರಿತು ಹೇಳುತ್ತವೆ. ಆಧ್ಯಾತ್ಮಿಕ ಪ್ರಪಂಚಕ್ಕೆ ಹೊಸ ಆಯಾಮಗಳನ್ನು ಸೇರಿಸಲಾಗಿದೆ, ಸಂಶೋಧಿಸಲಾಗಿದೆ. ನಾವು ಅರಸುವುದನ್ನು ಪಡೆಯುತ್ತೇವೆ. ಮೊದಲು ನಾವು ಯಾವುದೋ ಒಂದು ನೆಲೆಯಲ್ಲಿ ಒಂದಾಗಿ ಸೇರುತ್ತೇವೆಂಬುದರ ಬಗ್ಗೆ ಅರಿವಿರಬೇಕು. ಈ ಏಕತೆ ಈಗ ಅತ್ಯಂತ ಮುಖ್ಯವಾಗಿದೆ. ಭವಿಷ್ಯದ ಧರ್ಮ “ಏಕತೆ” ಆಗಿರಬೇಕು. ನಾವು ಏಕತೆಯನ್ನು ಅರ್ಥಮಾಡಿಕೊಳ್ಳಬೇಕು. ಅದನ್ನು ನಮ್ಮ ಅರಿವಿನಲ್ಲಿಟ್ಟುಕೊಳ್ಳಬೇಕು. ಏಕತೆಯನ್ನು ಸಾಧ್ಯವಾದರೆ ಎಲ್ಲ ಕಾಲದಲ್ಲಿ ಅನುಭವಿಸಬೇಕು. ಏಕತೆ ನಮಗೆ ಬಲ ನೀಡುತ್ತದೆ, ಏಕೆಂದರೆ ಏಕತೆಯಲ್ಲಿ ನಾವು ವಿಸ್ತರಿಸುತ್ತೇವೆ. ಏಕತೆ ನಮಗೆ ದಿಕ್ಕನ್ನು ತೋರಿಸುತ್ತದೆ. ಅದು ಸಮೃದ್ಧಿಯಾದ ಸಂತೋಷ ಕೊಡುತ್ತದೆ. ಏಕತೆಯೇ ಸಮಾಧಿ. ಹೀಗೆ ನಾವು ಹಳೆಯ ವಾಸ್ತವತೆಗಳಿಗೆ ಮತ್ತು ಸತ್ಯಗಳಿಗೆ ಹೊಸ ಅರ್ಥವನ್ನು ಕಾಣುತ್ತೇವೆ. ಇವುಗಳ ಬಗ್ಗೆ ನೀವು ಆಳವಾಗಿ ಚಿಂತಿಸಬೇಕು. ಆಗ ಹೊಸ ಯೋಚನೆಗಳು, ವಾಸ್ತವತೆಯ ಹೊಸ ಅಂಶಗಳು ನಿಮ್ಮಲ್ಲಿ ಹೊಳೆಯುತ್ತವೆ. ಹೀಗೆ ಜ್ಞಾನ ಇಳಿದು ಬರುತ್ತದೆ. ಈ ಪ್ರಕ್ರಿಯೆ ಬಹಳ ಸೃಜನಾತ್ಮಕ. ಸತ್ಯಯುಗವು ಪ್ರತಿಯೊಬ್ಬ ವ್ಯಕ್ತಿಯ ಆಂತರ್ಯದಿಂದ ಹುಟ್ಟುತ್ತದೆ, ಬೇರೆ ಎಲ್ಲೋ ಹುಟ್ಟುವುದಿಲ್ಲ.

ನೈಸರ್ಗಿಕವಾಗಿ ಹೆಚ್ಚು ಬೆಳಕು ಬರುವ ಕೋಣೆಯಲ್ಲಿ ಮಾತ್ರ ಸಂತೋಷವಾಗಿ ಧ್ಯಾನ ಮಾಡಬಲ್ಲೆನೆಂದು ಒಬ್ಬ ವ್ಯಕ್ತಿ ಪತ್ರ ಬರೆದು ತಿಳಿಸಿದರು. ನಾವು ಅವರನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿದಾಗ, ಅವರು ತಮ್ಮ ಹಿಂದಿನ ಜನ್ಮಗಳಲ್ಲಿ ಹೊರಾಂಗಣದಲ್ಲಿ ಹೆಚ್ಚು ಕಾಲ ಧ್ಯಾನ ಮಾಡಿದ್ದರೆಂಬುದು ತಿಳಿದು ಬಂದಿತು. ಆದ್ದರಿಂದ ಅವರಿಗೆ ನೈಸರ್ಗಿಕವಾಗಿ ಹೆಚ್ಚು ಬೆಳಕು ಬರದೇ ಇರುವ ಜಾಗದಲ್ಲಿ ಧ್ಯಾನಮಾಡಿದರೆ ಉಸಿರುಗಟ್ಟಿದಂತೆ ಭಾಸವಾಗುತಿತ್ತು. ನಾವು ಅವರಿಗೆ ಅಂತರಾಳದೊಳಕ್ಕೆ ಪ್ರವೇಶಿಸಿ ಅಲ್ಲಿ ಬೆಳಕನ್ನು ನೋಡಿ ಅದನ್ನು ಅನುಭವಿಸುವಂತೆ ಸಲಹೆ ನೀಡಿದೆವು. ಅವರ ಸಮಸ್ಯೆಗೆ ಇದು ಸೂಕ್ತ ಪರಿಹಾರ.

ಅನೇಕ ಜನರು ತಾವು ಸಮಾಧಿಯನ್ನು ಅನುಭವಿಸುತ್ತೇವೆ, ಎಂದು ಪತ್ರ ಬರೆಯುತ್ತಾರೆ. ನೀವು ಸರಿಯಾದ ದಿಕ್ಕಿನಲ್ಲಿ ನಿಜವಾಗಿಯೂ ಚಲಿಸುತ್ತಿದ್ದೀರಾ ಎಂಬುದನ್ನು ಪರೀಕ್ಷಿಸಿಕೊಳ್ಳಿ. ಕೆಲವು ಸಲ ನಾವು ಎಚ್ಚರವಿಲ್ಲದ ಸ್ಥಿತಿಯನ್ನು ಸಮಾಧಿ ಎಂದು ತಪ್ಪು ತಿಳಿಯುತ್ತೇವೆ. ಸಮಾಧಿಯನ್ನು ಒಂದು ಸಲ ಅನುಭವಿಸಿದರೂ ಆತ ಪರಿವರ್ತಿತ ವ್ಯಕ್ತಿ ಆಗುತ್ತಾನೆ. ಈ ಪರಿವರ್ತನೆ ಎಲ್ಲ ರೀತಿಯಲ್ಲಿ ಇಡೀ ಪ್ರಪಂಚಕ್ಕೇ ಕಾಣುತ್ತದೆ. ಎಚ್ಚರವಿಲ್ಲದಿರುವಿಕೆ ಒಳ್ಳೆಯದು. ಅದು ಸಮಾಧಿಯ ಮೊದಲ ಹೆಜ್ಜೆ. ಸಮಾಧಿಯನ್ನು ನೀವು ಅನುಭವಿಸಿದರೆ, ನೀವು ಅನುಭವಿಸುತ್ತಿರುವುದರ ಬಗ್ಗೆ ಸಂಪೂರ್ಣವಾಗಿ ಜಾಗೃತರಾಗಿರುತ್ತೀರಿ. ನಿಮ್ಮ ಅರಿವು ಮೇಲೇರುತ್ತದೆ ಮತ್ತು ಪ್ರಜ್ಞೆಯ ಇನ್ನೊಂದು ಹಂತವನ್ನು ತಲುಪಿ, ಅಲ್ಲಿ ಅರಿವು ವಿಸ್ತಾರ ವಾಗುತ್ತದೆ. ಇದು ಸಂಪೂರ್ಣ ಸಮಾಧಿ.

ಒಬ್ಬ ದೈವಿಕ ವ್ಯಕ್ತಿಯೊಂದಿಗೆ ನೀವು ಸಂಪರ್ಕವನ್ನು ಪಡೆದರೆ, ಪ್ರಾರಂಭದಲ್ಲಿ ನನ್ನೊಂದಿಗೆ ಪರೀಕ್ಷಿಸಿಕೊಳ್ಳಿ. ನಿಮ್ಮ ಅಂತರ್–ಗ್ರಹಣ ಶಕ್ತಿಯೊಂದಿಗೆ ಪರೀಕ್ಷಿಸಿ. ನೀವು ಸಂಪರ್ಕ ಪಡೆದಾಗ, ಭಾವೋದ್ವೇಗಕ್ಕೆ ಒಳಗಾದರೆ ಆ ಚಾನಲ್‌ನಲ್ಲಿ ತಡೆ ಉಂಟಾಗಿ, ನೀವು ಸಂಪೂರ್ಣ ಸಂಪರ್ಕ ಪಡೆಯುವುದಿಲ್ಲ. ಆದ್ದರಿಂದ ಜಾಗರೂಕರಾಗಿರಿ. ಈ ವಿಷಯಕ್ಕೆ ನಾನು ಒತ್ತುಕೊಟ್ಟು ಹೇಳುವುದೇಕೆಂದರೆ ಇನ್ನು ಮುಂದೆ ನಮ್ಮಲ್ಲಿ ಅನೇಕರು ಅಥವಾ ಎಲ್ಲರೂ ಸಂಪರ್ಕಗಳನ್ನು ಪಡೆಯುತ್ತೇವೆ. ನಾನು 2012ರ ಹಿನ್ನೆಲೆಯಲ್ಲಿ ಈ ವಿಷಯ ಮಾತನಾಡುತ್ತಿದ್ದೇನೆ. ನೀವು ಸಂದೇಶಗಳನ್ನು ಪಡೆದಾಗ ಶಾಂತಚಿತ್ತರಾಗಿ ಮತ್ತು ಶುದ್ಧರಾಗಿ ಇರಬೇಕು. ಸರಿಯಾದ, ಸಂಪೂರ್ಣ ಸಂದೇಶಗಳನ್ನು ಪಡೆಯುವುದು ಬಹಳ ಮುಖ್ಯ. ■

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರುವವರಿಗೆ ಅಂಚೆ ಮತ್ತು ಇ-ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲಿಷ್‌ನಲ್ಲಿ (ವರ್ಷಕ್ಕೆ ರೂ. 1000/-), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 700/-) ಪಾಠಗಳನ್ನು ಕಳುಹಿಸಲಾಗುವುದು.

ವಾರ್ಷಿಕ ಫ್ಲೀನಲ್ಲಿ ಪಠ್ಯ ಪುಸ್ತಕಗಳು ಮತ್ತು ವಾರ್ತಾಪತ್ರಿಕೆಯ ಒಂದು ವರ್ಷದ ಚಂದಾ ಸೇರಿರುತ್ತದೆ.

- ★ ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ-ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿ ಕೊಡಲಾಗುವುದು.
- ★ ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ★ ಎಲ್ಲಾ ಪ್ರಶ್ನೆಗಳಿಗೆ ಮತ್ತು ಸಂದೇಹಗಳಿಗೆ ಗುರೂಜಿಯವರೇ ಉತ್ತರಿಸುತ್ತಾರೆ.
- ★ ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ★ ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

**ಚೆಕ್/ಡಿಡಿಗಳನ್ನು "ಮಾನಸ ಫೌಂಡೇಶನ್ (ರಿ)" ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.**

### ಗುರೂಜಿಯವರಿಂದ ವಿಶೇಷ ಸೂಚನೆಗಳು

- ★ ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ★ ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ★ ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ★ ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ★ ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## 7-3-2010ರಂದು ಜಯಂತ್‌ರವರ ಭಾಷಣದ ಆಯ್ದ ಭಾಗಗಳು

ಸಂ: ಶೋಭಾ ಕೆ.ರಾವ್, ಅನು: ವರ್ಷಾ ಗುರ್ಜರ್

ಬಹುಶಃ ಗುರೂಜಿಯವರ ಜೀವನ, ಅವರ ಕೆಲಸ, ಅವರ ಗುರು, ಮೌಲ್ಯಗಳು ಮತ್ತು ಆಧ್ಯಾತ್ಮಿಕ ನಿಯಮಗಳೆಡೆಗಿನ ಹೋರಾಟ ಹಾಗೂ ಬದ್ಧತೆಗೆ ಒಂದು ಅತ್ಯುತ್ತಮ ಉದಾಹರಣೆಯಾಗಿದೆ.

ಮಹರ್ಷಿ ಅಮರರ ಮಹಾಸಮಾಧಿಯ ನಂತರ ಗುರೂಜಿಯವರು ಅನೇಕ ಕಷ್ಟಪರಿಸ್ಥಿತಿಗಳನ್ನು ಎದುರಿಸಬೇಕಾಯಿತು ಮತ್ತು ಅಮರರ ಕೆಲಸ ಮುಂದುವರೆಯುವುದನ್ನು ಅವರು ಖಚಿತಪಡಿಸಿಕೊಳ್ಳಬೇಕಾಗಿತ್ತು.

ಇತ್ತೀಚೆಗೆ ಒಬ್ಬ ವ್ಯಕ್ತಿ ಗುರೂಜಿಯವರನ್ನು, ಇಷ್ಟೆಲ್ಲ ವಿಶ್ವಾಸಘಾತಕತನ, ನೋವು, ತೇಜೋವಧೆ ಮತ್ತು ಆಶಾಭಂಗಗಳ ನಂತರವೂ ನೀವು ಹೇಗೆ ಕೆಲಸ ಮುಂದುವರೆಸಲು ಸಾಧ್ಯವಾಯಿತೆಂದು ಕೇಳಿದರು. ಅದಕ್ಕೆ ಗುರೂಜಿಯವರು ಹೀಗೆ ಉತ್ತರಿಸಿದರು:

"ನಾನು ಈ ದಾರಿಯನ್ನು ಆಯ್ಕೆಮಾಡಿಕೊಂಡಿರುವುದರಿಂದ ಮತ್ತು ಅದರ ಜೊತೆ ಬರುವ ನೋವು, ದ್ರೋಹ ಹಾಗೂ ನಿರಾಸೆಗಳನ್ನು ಒಪ್ಪಿಕೊಂಡಿದ್ದರಿಂದ, ಇದನ್ನೆಲ್ಲ ಅನುಭವಿಸುತ್ತಿರಬಹುದು. ಈ ಜನರನ್ನು ಮೇಲೆತ್ತುವುದು ನನ್ನ ಉದ್ದೇಶ. ಇದಕ್ಕೆ, ಅಪಾರವಾದ ತಾಳ್ಮೆ ಮತ್ತು ಪ್ರೀತಿಯ ಅಗತ್ಯವಿದ್ದು ಅದನ್ನು ನಾನು ಧ್ಯಾನದಿಂದ ಪಡೆಯುತ್ತೇನೆ. ದೇವರೆಡೆಗೆ ನಮ್ಮ ಪ್ರೀತಿ ಅಗಣಿತವಾದುದು. ನಾವು ಅವನನ್ನು ಕೆಳಕ್ಕಿಳಿಸಬಾರದು. ಸನ್ನಿವೇಶಗಳು ಬದಲಾಗುತ್ತವೆ ಎನ್ನುವ ಭರವಸೆ ನನಗಿದೆ. ಇದು ನನಗೆ ಗೊತ್ತಿದೆ ಏಕೆಂದರೆ ನಾನು ದೇವರನ್ನು ಬಲ್ಲೆ."

"ನಾವು ಶಾಂತತೆಯಿಂದ ಮತ್ತು ಪರಿಶುದ್ಧ ಅಂತರಾಳದಿಂದ ದೇವರೊಂದಿಗೆ ಸಂಪರ್ಕ ಕಲ್ಪಿಸಿಕೊಂಡು ಸದಾ ಸಂಪರ್ಕದಲ್ಲಿದ್ದರೆ, ಆಗ ನಮಗದು ತಿಳಿಯುತ್ತದೆ ಮತ್ತು ನಾವು ಸುರಕ್ಷಿತರಾಗಿರುತ್ತೇವೆ. ದೈವ ತನ್ನದೇ ಆದ ರೀತಿಯಲ್ಲಿ ಕೆಲಸ ಮಾಡುತ್ತದೆ ಮತ್ತು ನಾವು ನಮ್ಮದೇ ಆದ ರೀತಿಯಲ್ಲಿ ಕೆಲಸ ಮಾಡಬೇಕು. ನಮ್ಮಲ್ಲಿ ಪ್ರೀತಿ ಇರಬೇಕು ಆದರೆ ವಿವೇಚಿಸದೆ ನಂಬಬಾರದು. ನಾವು ಸಹಾಯ ಮಾಡಬೇಕು ಆದರೆ ಶೋಷಣೆಗೆ ಅವಕಾಶ ಕೊಡಬಾರದು. ನಾವು ದಯೆ ತೋರಬೇಕು ಆದರೆ ನಮ್ಮ ಕ್ರಿಯೆಯಲ್ಲಿ ನಿರ್ದಾಕ್ಷಿಣ್ಯರಾಗಿರಬೇಕು. ನಾವು ಸಾಹಸಿಗಳಾಗಿರಬೇಕು ಆದರೆ ಹೆಚ್ಚಿನ ಅಪಾಯಕ್ಕೆ ಅವಕಾಶ ಕೊಡಬಾರದು. ನಾವು ಕನಸು ಕಾಣಬೇಕು ಆದರೆ ನಾವು ಭೂಮಿಯ ಮೇಲೆ ಭದ್ರವಾಗಿ ನೆಲೆಯೂರಿರಬೇಕು. ಇದೆಲ್ಲವೂ ಅಧ್ಯಾತ್ಮ."

"ಬೆಳಕನ್ನು ಸದಾ ನಿಮ್ಮಲ್ಲಿ ಇಟ್ಟುಕೊಂಡಿರಿ. ಬೆಳಕು ನಿಮಗೆ ಸಹಾಯ ಮಾಡುತ್ತದೆ."

ಗುರೂಜಿಯವರ ಈ ಉತ್ತರ ಆಧ್ಯಾತ್ಮಿಕತೆಯ ಸಾರವನ್ನು ಒಳಗೊಂಡಿದೆ. ■

## ಗುರೂಜಿ

ಶ್ಯಾಮಲಾದೇವಿ; ಅನು: ಪಾಂಡುರಂಗ

ಸುಸಂಸ್ಕೃತ ಮತ್ತು ಗೌರವಾನ್ವಿತ ಕುಟುಂಬದಲ್ಲಿ ಜನಿಸಿದ ಗುರೂಜಿಯವರು ಸಹಜವಾಗಿಯೇ ಬಾಲ್ಯದಿಂದಲೇ ಆ ಮೌಲ್ಯಗಳನ್ನು ಮೈಗೂಡಿಸಿಕೊಂಡರು. ಅವರ ಕುಟುಂಬದ, ಶಿಸ್ತು ಮತ್ತು ಮುಕ್ತ ಮನಸ್ಸಿನ ಹಿರಿಯರು ಗುರೂಜಿಯವರ ಆದರ್ಶವಾಗಿದ್ದರು.

ಬಾಲ್ಯದ ದಿನಗಳಿಂದಲೇ ಭಗವದ್ಗೀತೆಯಂತಹ ಪುಸ್ತಕಗಳನ್ನು ಅಧ್ಯಯನ ಮಾಡಲು ಗುರೂಜಿಯವರಿಗೆ ಪ್ರೋತ್ಸಾಹ ದೊರೆಯಿತು. ಆ ಸರ್ವವ್ಯಾಪಿ ಮೌಲ್ಯಗಳು ಎಳೆಯ ಮನಸ್ಸಿನ ಮೇಲೆ ಅಚ್ಚಳಿಯದಂತೆ ಮೂಡಿದವು ಮತ್ತು ಹಿಂಬದಿಯಲ್ಲಿ ಸತ್ಯದ ಅನ್ವೇಷಣೆಯ ದಾಹ ಶುರುವಾಯಿತು. ಸತ್ಯದ ದಾಹ ಅವರನ್ನು, ಸತ್ಯಕ್ಕೆ ಹೊಂದದ ಎಲ್ಲವನ್ನು ತಿರಸ್ಕರಿಸುವಂತೆ ಮಾಡಿತು. ಇದಕ್ಕೆ ಪೂರಕವಾಗಿ, ಗುರೂಜಿಯವರ ತಂದೆಯವರು ಕೂಡ ಚಿಕ್ಕ ಬಾಲಕನ ವಿಚಾರಗಳನ್ನು ಗೌರವಿಸುವುದರ ಜೊತೆಗೆ ಸಂಪೂರ್ಣ ಸ್ವಾತಂತ್ರ್ಯವನ್ನು ನೀಡಿದರು.

ಸ್ವಾಭಾವಿಕವಾಗಿ ಸಂಕೋಚ ಸ್ವಭಾವದವರು ಮತ್ತು ಅಂತರ್ಮುಖಿಯಾದ ಗುರೂಜಿಯವರು ಪುಸ್ತಕಗಳೊಂದಿಗೆ ಗೆಳೆತನ ಬೆಳೆಸಿಕೊಂಡರು. ಅವರು ಕನ್ನಡ ಮತ್ತು ಇಂಗ್ಲೀಷ್ ಸಾಹಿತ್ಯಗಳನ್ನು ಆಳವಾಗಿ ಅಧ್ಯಯನ ಮಾಡಿದರು. ಅವರು ಕಾದಂಬರಿ, ಕವನಗಳನ್ನು ಬರೆದರು. ಹುಟ್ಟಿನಿಂದಲೇ ವರವಾಗಿ ಬಂದ ಚಿತ್ರಕಲೆ ಅವರಿಂದ ಅನೇಕ ಚಿತ್ರಗಳನ್ನು ಬರೆಸಿತು. ಅವರ ಕಲಾಕೃತಿಗಳು ಪ್ರದರ್ಶನಗೊಂಡವು.

ಉತ್ತಮ ಅಭಿರುಚಿಗಳು ಹಾಗೂ ಪ್ರಕೃತಿಯೊಂದಿಗೆ ನಿಕಟಸಂಪರ್ಕ ಬೆಳೆಸಿಕೊಂಡರು. ಅವರು ಬೆರಳೆಣಿಸುವಷ್ಟು, ಆದರೆ ಅತ್ಯುತ್ತಮ ಸ್ನೇಹಿತರನ್ನು ಹೊಂದಿದ್ದರು. ವೈಯಕ್ತಿಕ ಆಕಾಂಕ್ಷೆ ಮತ್ತು ಜವಾಬ್ದಾರಿಗಳಲ್ಲಿ ಒಂದನ್ನು ಆಯ್ಕೆ ಮಾಡಬೇಕಾದ ಸಂದರ್ಭ ಬಂದಾಗ, ಅವರು ವೈಯಕ್ತಿಕ ಆಕಾಂಕ್ಷೆಯನ್ನು ತ್ಯಾಗವಾಡಿ ಜವಾಬ್ದಾರಿಯ ಹೊರೆಹೊತ್ತರು. ಪ್ರತಿಯೊಂದು ವಿಷಯವನ್ನೂ ಅವರು ಉನ್ನತ ದೃಷ್ಟಿಕೋನದಿಂದ ನೋಡಿ ಅರ್ಥಮಾಡಿಕೊಳ್ಳುತ್ತಿದ್ದರು. ಒಂದು ಮಹತ್ಕಾರ್ಯವನ್ನು ಹೊತ್ತು ಹುಟ್ಟಿಬಂದ ವ್ಯಕ್ತಿ ಅವರು. ಚಿಕ್ಕಂದಿನಿಂದಲೂ ಅವರೊಬ್ಬ ದಾರ್ಶನಿಕರಾಗಿದ್ದರು.

ಇಂದು ಗುರೂಜಿ ಒಬ್ಬ ಬೆಳಕಿನ ಮಾಸ್ಟರ್; ವಿಶ್ವ-ಮಾಸ್ಟರ್‌ಗಳ ಪ್ರತಿನಿಧಿ. ಮಾನವ ಜನಾಂಗ ಮತ್ತು ಪ್ರಪಂಚದ ರಕ್ಷಣೆಗಾಗಿ ಅವರು ಪ್ರಾರಂಭಿಸಿರುವ ಲೈಟ್ ಚಾನಲ್ಸ್ ವಿಶ್ವಸಂಚಲನ, ಭೂಮಿಯ ಮೇಲಿರುವ ಎಲ್ಲ ಜೀವಿಗಳ ಬಗ್ಗೆ ಅವರಿಗಿರುವ ಅಗಾಧವಾದ ಪ್ರೀತಿ ಮತ್ತು ಕಾಳಜಿಗಳನ್ನು ಎತ್ತಿತೋರಿಸುತ್ತದೆ. ಇಡೀ ವಿಶ್ವದ ಏಳಿಗೆಯ ಗುರಿಯನ್ನು ಹೊತ್ತು ಬಂದಿರುವ ಅವರು ಒಬ್ಬ ವಿಶ್ವಮಾನವ. ■

## ಪ್ರಶ್ನೆಗಳು ಮತ್ತು ಉತ್ತರಗಳು

(ಸಂಗ್ರಹ: ಶೋಭಾ ಕೆ. ರಾವ್, ಅನು: ಉಷಾ ವಾಸನ್)

**ಪ್ರ: ಕೆಲವೊಮ್ಮೆ ಧ್ಯಾನ ಮಾಡುವಾಗ ನನ್ನ ಗಮನ ಮಂತ್ರದಿಂದ ಬೆಳಕಿನೆಡೆಗೆ ಹೋಗುತ್ತದೆ. ನಾನೇನು ಮಾಡಬೇಕು?**

ಉ: ಇಂತಹ ಸಮಯದಲ್ಲಿ ಏನೂ ಮಾಡಬೇಡಿ. ಏನೂ ಮಾಡದಿರುವುದೇ ಧ್ಯಾನದ ಕೀಲಿಕೈ. ಧ್ಯಾನದ ಉದ್ದೇಶ ಮಂತ್ರ, ತಂತ್ರ, ಮನಸ್ಸು ಮತ್ತು ಬುದ್ಧಿ, ಇವುಗಳನ್ನು ಮೀರಿ ಮುಂದೆ ಹೋಗುವುದು.

**ಪ್ರ: ನೇರವಾಗಿ ಶಾಂತಿಯನ್ನು ಅನುಭವಿಸುವುದು ಧ್ಯಾನಕ್ಕೆ ಸಮನಾದುದೇ?**

ಉ: ಅಲ್ಲ. ಧ್ಯಾನ ಒಂದು ಸರಪಣಿಯಂತಹ ಪ್ರಕ್ರಿಯೆ. ಶಾಂತಿ ಒಂದು ಸ್ಥಿತಿ, ಅನುಭವ. ಶಾಂತಿ ಅಂತಿಮ ಪರಿಣಾಮ.

**ಪ್ರ: ಧ್ಯಾನ ಮಾಡುವಾಗ ಕೆಲವೊಮ್ಮೆ ನನಗೆ ನನ್ನ ತಲೆ ಬಾಗಿರುವಂತೆ ಅನುಭವವಾಗುತ್ತದೆ. ವಾಸ್ತವದಲ್ಲಿ ಹಾಗಾಗಿರುವುದಿಲ್ಲ. ಇದು ಏಕೆ?**

ಉ: ನಮ್ಮ ಅಶರೀರ ದೇಹದಲ್ಲಿ ತಲೆ ಬಾಗಿರುತ್ತದೆ, ಭೌತಿಕ ದೇಹದಲ್ಲಲ್ಲ. ಯೋಚನೆ ಮಾಡಬೇಡಿ.

**ಪ್ರ: ಚಾನಲಿಂಗ್ ರೇಖಿ ತರಹವೇ?**

ಉ: ಹಾಗೆ ಹೇಳಬಹುದು. ರೇಖಿಯಲ್ಲಿ ನಾವು ಒಂದು ಜಾಗ ಅಥವಾ ವ್ಯಕ್ತಿಯನ್ನು ಹೀಲ್ ಮಾಡುತ್ತೇವೆ. ಆದರೆ ನಾವು ಚಾನಲ್ ಮಾಡುವಾಗ ಇನ್ನೂ ಹೆಚ್ಚಿನದನ್ನು ಮಾಡುತ್ತೇವೆ. ನಾವು ಬೆಳಕಿನ ಜೊತೆಯಲ್ಲಿ ಶಕ್ತಿ,ಚೈತನ್ಯಗಳನ್ನು ಮತ್ತು ಇನ್ನೂ ಬೇರೆ ವಸ್ತುಗಳನ್ನು ವರ್ಗಾಯಿ ಸುತ್ತೇವೆ. ನಾವು ಚಾನಲಿಂಗ್ ಮಾಡುವಾಗ ಇಡೀ ಪ್ರಪಂಚದ ಬಗ್ಗೆ ಯೋಚಿಸುತ್ತೇವೆ. ನೀವು ರೇಖಿ ಅಭ್ಯಸಿಸುವಾಗ ಒಬ್ಬರು ಅಥವ ಇಬ್ಬರು ವ್ಯಕ್ತಿಗಳನ್ನು ಯೋಚಿಸುತ್ತೀರಿ. ಬೆಳಕಿಗೆ ಅಸಾಧಾರಣ ಬುದ್ಧಿಶಕ್ತಿ, ಪ್ರೀತಿ ಮತ್ತು ಕಾಳಜಿ ಇರುತ್ತದೆ. ಅದು ವ್ಯಕ್ತಿಯ ಒಳಹೊಕ್ಕು, ಆತನ ಶಕ್ತಿಯನ್ನು ಹೆಚ್ಚಿಸುತ್ತದೆ ಮತ್ತು ಯುಕ್ತ ರೀತಿಯಲ್ಲಿ ಮಾರ್ಗದರ್ಶನ ನೀಡುತ್ತದೆ. ಬೆಳಕು ಹೀಲ್ ಮಾಡುತ್ತದೆ, ಅದು ಶುದ್ಧಗೊಳಿಸುತ್ತದೆ ಮತ್ತು ಪವಿತ್ರ ಗೊಳಿಸುತ್ತದೆ. ಹೀಲ್ ಮಾಡುವಾಗ ಈ ಪ್ರಕ್ರಿಯೆಗಳು ಘಟಿಸದಿರಬಹುದು. ಕನಿಷ್ಟಪಕ್ಷ ಬೆಳಕಿನ ಚಾನಲಿಂಗ್‌ನಲ್ಲಿ ಘಟಿಸುವಷ್ಟು ಕ್ರಿಯೆಗಳು ಹೀಲಿಂಗ್‌ನಲ್ಲಿ ಘಟಿಸುವುದಿಲ್ಲ.

**ಪ್ರ: ಧ್ಯಾನ ಮತ್ತು ಚಾನಲಿಂಗ್‌ನ ವ್ಯತ್ಯಾಸವೇನು?**

ಉ: ಧ್ಯಾನದಲ್ಲಿನಾವು ಸಮಾಧಿಯನ್ನು ಅನುಭವಿಸಲು ಪ್ರಯತ್ನಿಸುತ್ತೇವೆ. ಚಾನಲಿಂಗ್ ಸಮಾಧಿಗೆ ಕರೆದೊಯ್ಯುವುದಿಲ್ಲ. ಧ್ಯಾನ ಬಹಳ ಪ್ರಕ್ರಿಯೆಗಳನ್ನು ಒಳಗೊಂಡಿರುತ್ತದೆ. ಸಮಾಧಿ ವೈಯಕ್ತಿಕ, ವ್ಯಕ್ತಿಗೆ ಲಾಭದಾಯಕ. ಚಾನಲಿಂಗ್‌ನಿಂದ ಮಿಲಿಯನ್ ಜನರು ಲಾಭ ಪಡೆಯುತ್ತಾರೆ.

**ಪ್ರ: ಚಾನಲಿಂಗ್ ಕೋಪವನ್ನು ನಿಗ್ರಹಿಸುವುದಕ್ಕೆ ದಾರಿ ತೋರಿಸುತ್ತದೆಯೆ?**

ಉ: ಅದು ಸಹಾಯ ಮಾಡುತ್ತದೆ. ಎಲ್ಲಾ ಆಧ್ಯಾತ್ಮಿಕ ಚಟುವಟಿಕೆಗಳೂ ಸಹಾಯ ಮಾಡುತ್ತವೆ ಆದರೆ ಅವುಗಳಾಗಿಯೇ ಸ್ವಿಚ್ ತರಹ ಕೆಲಸ ಮಾಡುವುದಿಲ್ಲ. ಇಲ್ಲಿಯೇ ಇದರ ಕೀಲಿಕೈ ಇದೆ. ನಾವು ನಿಜವಾಗಿ ಪರಿವರ್ತನೆಗೊಳ್ಳಲು ಸಂಕಲ್ಪಿಸಬೇಕು. ಎಲ್ಲ ನಕಾರಾತ್ಮಗಳನ್ನು ಪ್ರಜ್ಞಾಪೂರ್ವಕವಾಗಿ ಹೊರಹಾಕಬೇಕು.

**ಪ್ರ: ಏಳು ನಿಮಿಷಗಳ ಚಾನಲಿಂಗ್‌ನ ಮಹತ್ವವೇನು? ಸಂಖ್ಯೆ ಏಳರ ಮಹತ್ವವೇನು?**

ಉ: ಏಳು, 108ರಂತೆ ಒಂದು ನಿಗೂಢ ಸಂಖ್ಯೆ. ಬದುಕು ತುಂಬಾ ಭಾರ. ಕೆಲವೊಮ್ಮೆ ನಮಗೆ ಆ ಏಳು ನಿಮಿಷ ಸಮಯ ಸಿಗುವುದೂ ಕಷ್ಟ. ಅದಕ್ಕೋಸ್ಕರವೇ ನಾವು ಕಡಿಮೆಯೆಂದರೂ ಏಳು ನಿಮಿಷಗಳ ಚಾನಲ್‌ಮಾಡಲು ಹೇಳಿರುವುದು.

**ಪ್ರ: ನಾವು ನಮ್ಮ ಮಕ್ಕಳಿಗೆ ಬೆಳಕನ್ನು ಚಾನಲ್ ಮಾಡಬಹುದೇ?**

ಉ: ನೀವು ಮಾಡಬಹುದು. ಬೆಳಕನ್ನು ಇಡೀ ಪ್ರಪಂಚಕ್ಕೆ ಚಾನಲ್ ಮಾಡಿದರೆ, ಬೆಳಕು ನಿಮ್ಮ ಮಕ್ಕಳನ್ನು ರಕ್ಷಿಸುತ್ತದೆ.

**ಪ್ರ: ಚಾನಲಿಂಗ್ ಮಾಡುವಾಗ ನನಗೆ ವಿಸ್ತಾರಗೊಂಡ ಅನುಭವವಾಗುತ್ತದೆ ಮತ್ತು ತಂತ್ರ ಮರೆತು ಹೋಗುತ್ತದೆ. ನಾನೇನು ಮಾಡಲಿ?**

ಉ: ನೀವು ವಿಸ್ತಾರಗೊಂಡ ಅನುಭವ ಪಡೆದರೆ ಒಳ್ಳೆಯದೇ. ಅದು ನೀವು ಚಾನಲಿಂಗ್–ಅನ್ನು ಚೆನ್ನಾಗಿ ಮಾಡುತ್ತಿರುವ ಸಂಕೇತ. ತಂತ್ರ ಮುಖ್ಯವಲ್ಲ.ತಂತ್ರಗಳು ಬೆಂಬಲಿ ಗರಂತೆ, ಊರುಗೋಲಿನಂತೆ ಅಥವಾ ಮೆಟ್ಟಿಲುಗಳಂತೆ.

**ಪ್ರ: 2012ರ ನಂತರ ಆಸ್ಪತ್ರೆಗಳ ಅವಶ್ಯಕತೆ ಇದೆಯೇ? ನಾನು ಯಾರಿಗೆ ಚಿಕಿತ್ಸೆ ನೀಡಲಿ?**

ಉ: 2012ರ ನಂತರ ಪ್ರಪಂಚ ಕೊನೆ ಗೊಳ್ಳುತ್ತದೆಂದು ತಿಳಿದು ನಾವು ನಮ್ಮ ಬದುಕನ್ನು ಬದಲಿಸಬಾರದು, ಅಥವಾ ನಮ್ಮ ಅನ್ವೇಷಣೆಗಳನ್ನು ನಿಲ್ಲಿಸಬಾರದು. ಪ್ರಪಂಚ ಕೊನೆಗೊಳ್ಳುವುದಿಲ್ಲವೆಂದು ನಮಗೆ ತಿಳಿದಿದೆ. ನಾವು ಮನುಷ್ಯ ಮಟ್ಟದಲ್ಲಿ ಸಿದ್ಧವಾಗ ಬಾರದು, ಆಧ್ಯಾತ್ಮಿಕ ಮಟ್ಟದಲ್ಲಿ ಸಿದ್ಧ ಗೊಳ್ಳಬೇಕು. ಹೀಗೆಂದರೆ, ಆಧ್ಯಾತ್ಮಿಕವಾಗಿ ಬೆಳೆಯುವುದು, ಬದಲಾಗುವುದು ಮತ್ತು ಪರಿವರ್ತನೆಗೊಳ್ಳುವುದು. ■


## ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| Beyond 2012 | 80/- |
| 2012 - End or Beginning | 100/- |
| iGuruji - Vol 1 | 150/- |
| iGuruji - Vol 2 | 120/- |
| Living in the Light of My Guru | 220/- |
| A Package from the Rishis (containing 5 Booklets) - How to Meditate - Dhyana Yoga - Descent of Soul - Practising Shambala Principles - Astral Ventures of A Modern Rishi | 250/- |
| The Masters Answer | 120/- |
| Channelled Knowledge from the Rishis | 250/- |
| Guruji Speaks Part - I | 200/- |
| Guruji Speaks Part - II | 200/- |
| The Book of Reflections - Vol 1 | 200/- |
| The Book of Reflections - Vol 2 | 200/- |
| Meditators on Meditations | 75/- |
| Meditators on Experiences | 75/- |
| Meditational Experiences | 150/- |
| Awareness | 60/- |
| Living in Light | 10/- |
| Light | 10/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಐ–ಗುರೂಜಿ ಭಾಗ 1 | 150/- |
| ಐ–ಗುರೂಜಿ ಭಾಗ 2 | 120/- |
| ಅನಿಸಿಕೆಗಳು | 120/- |
| 2012 ಅಂತ್ಯ ಅಥವಾ ಆರಂಭ | 100/- |
| ಋಷಿಗಳಿಂದ ಬಂದ ಕೊಡುಗೆ (ಐದು ಪುಸ್ತಕಗಳು) – ಧ್ಯಾನ ಮಾಡುವುದು ಹೇಗೆ – ಧ್ಯಾನ ಯೋಗ – ಆತ್ಮದ ಅವರೋಹಣ –ಶಂಬಲ ನಿಯಮಗಳ ಅಭ್ಯಾಸ – ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | 250/- |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ಬೆಳಕು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ऋषींकडून मिळालेले ज्ञान (Marathi) | 200/- |
| प्रकाशवाट (Marathi) | 150/- |
| २०१२ – अंत की आरंभ? (Marathi) | 100/- |
| आयगुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्त्वांचा अभ्यास (Marathi) | 50/- |
| एका आधुनिक ऋषीचे सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| प्रकाश (Marathi) | 10/- |
| २०१२ नंतर (Marathi) | 80/- |
| ध्यान कैसे करे (Hindi) | 50/- |
| ध्यान-योग (Hindi) | 50/- |
| प्रकाश (Hindi) | 10/- |
| प्रकाशमय जीवन (Hindi) | 10/- |
| प्रकाश की ओर (Hindi) | 150/- |
| தியானம் செய்வது எப்படி | 50/- |
| ஒளியின் வாயில்கள் | 200/- |
| 2012 முடிவா அல்லது தொடகமா | 100/- |
| ஒளியில் வாழ்க்கை | 10/- |
| ஒளி | 10/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |
| ధ్యానం చేయ్యడం ఎలా | 50/- |
| వెలుగులో జీవించడం | 10/- |
| కాంతి | 10/- |
| కాంతికి ద్వారములు | 150/- |

RNI. No. KARKAN/2003/13739 Registered Postal Regn. No. CPMG/KA/CNA-48/2009-11
Date of posting Newsletter-25th of Every Month. No. of Pages-8



**ಗುರೂಜಿ ಕೃಷ್ಣಾನಂದ (1939)**

### ಮಾನಸ ಫೌಂಡೇಶನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ಮಾನಸ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

### ಲೈಟ್ ಚಾನಲಿಂಗ್

ಪ್ರತಿ ಶುಕ್ರವಾರ ಬೆಳಿಗ್ಗೆ 10 ರಿಂದ 1 ರವರೆಗೆ ಗುರೂಜಿಯುವರೊಂದಿಗೆ ಧ್ಯಾನಿಗಳು ಲೈಟ್ ಚಾನೆಲಿಂಗ್ ಅನ್ನು ಮಾಡುತ್ತಾರೆ. ಯಾರಾದರೂ ಇದರಲ್ಲಿ ಭಾಗವಹಿಸಬಹುದು.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('ಮಾನಸ ಫೌಂಡೇಶನ್'ನ ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು. 80–G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

## ಆಧ್ಯಾತ್ಮಿಕ ಅನುಭವಗಳು

(ಸಂಗ್ರಹ: ಶೋಭಾ ಕೆ.ರಾವ್, ಅನು: ಸ್ವರ್ಣಲತ)

ನಾನು ಸಮಯ ಸಿಕ್ಕಾಗಲೆಲ್ಲಾ ಬೆಳಕನ್ನು ಚಾನಲ್ ಮಾಡುತ್ತೇನೆ. ಈಗ ಬೆಳಕು ನನ್ನ ಸಂಗಾತಿಯಾಗಿದೆ ಮತ್ತು ಅದು ನನ್ನಲ್ಲಿ ಯಾವಾಗಲೂ ತುಂಬಿರುತ್ತದೆ. ಬರಿ ಬೆಳಕೆಂಬ ಯೋಚನೆಯೇ ನನ್ನಲ್ಲಿ ಶಾಂತಿ ಹಾಗೂ ಸಂತೋಷವನ್ನು ಉಂಟುಮಾಡುತ್ತದೆ. ಕೆಲವು ವೇಳೆ ನನ್ನ ಸುತ್ತ ಒಂದು ಬೆಳಕಿನ ಆಕೃತಿಯನ್ನು ಕಾಣುತ್ತೇನೆ. –ಅರ್ಚನಾ ಪಿಳ್ಳೈ

ಅನೇಕ ಸಲ ಧ್ಯಾನದಲ್ಲಿ ನನ್ನ ದೇಹವು ಭೂಮಿಯಿಂದ ಅತಿ ಎತ್ತರದಲ್ಲಿ, ಗಾಳಿಯಲ್ಲಿ ತೇಲುತ್ತಿರುವಂತೆ ಅನಿಸುತ್ತದೆ. ಅಲ್ಲಿಂದ ಈ ಭೂಮಿಯು, ಒಂದು ದೊಡ್ಡ ಗೋಳದಂತೆ ಕಾಣಿಸುತ್ತದೆ. ಸೂರ್ಯನಿಂದ ಬಿಳಿ, ಹೊಂಬಣ್ಣ ಹಾಗೂ ಗುಲಾಬಿ ಬಣ್ಣದಿಂದ ಕೂಡಿದ ಚೈತನ್ಯಗಳು ನನ್ನೊಳಗೆ ಹರಿದು ಪ್ರಕಾಶಿಸಿದವು. ನಾನು ಅವುಗಳನ್ನು ಈ ಭೂಮಿಗೆ ಕಳುಹಿಸಿದಾಗ, ಭೂಮಿಯು ಆ ಬೆಳಕಿನಿಂದ ಪ್ರಜ್ವಲಿಸಲು ಆರಂಭಿಸಿತು. –ದಿಲೀಪ್ ಪರುಲೇಕರ್

ನನ್ನ ಕೆಲಸ ಹೆಚ್ಚು ಸಂದರ್ಭಗಳಲ್ಲಿ ಬರವಣಿಗೆ ಆದುದರಿಂದ, ಒಂದು ಒಳ್ಳೆಯ ಪೆನ್‌ಗಾಗಿ ಹುಡುಕಾಡುತ್ತಿದ್ದೆ. ಅಂತಹ ಪೆನ್ ನನಗೆ ಸಿಕ್ಕಿರಲಿಲ್ಲ. ಅಮರ ಜಯಂತಿಯಂದು ನಾನು ಒಂದು ಅಂಗಡಿಯಲ್ಲಿ ಹಣ ಪಾವತಿಸಲು ಕೌಂಟರ್ ಬಳಿ ಹೋದಾಗ, ನನಗೆ ಬೇಕಾದಂಥ ಪೆನ್ ಕಾಣಿಸಿತು. ನನ್ನ ಅತಿ ಸಣ್ಣ ಬಯಕೆಯನ್ನು ಸಹ ಭಗವಂತ, ಗುರು ಹಾಗೂ ಋಷಿಗಳು ಗುರುತಿಸಿ, ಪೂರೈಸಿದ ಅವರ ಪ್ರೀತಿಗೆ ನಾನು ಮನಸೋತೆನು. ನಾನೀಗ ಜೀವನದಲ್ಲಿ ಯಾವುದೇ ಕಾರಣಕ್ಕೂ ಚಿಂತಿಸಬೇಕಾಗಿಲ್ಲ ಎಂದು ಅರಿತೆನು. –ಗೀತಾ ಜೋಶಿ

ನನ್ನ ಮೊದಲ ದಿನದ ಧ್ಯಾನದಲ್ಲಿ ಒಂದು ದೊಡ್ಡ ವೃತ್ತಾಕಾರದ ಬಿಳಿಯ ಬೆಳಕು ತಲೆಯ ಮೂಲಕ ನನ್ನ ದೇಹದೊಳಗೆ ಇಳಿಯಿತು. ನಂತರದ ದಿನಗಳಲ್ಲಿ ಆ ಬೆಳಕು ಸಣ್ಣ ಸಣ್ಣ ಬೆಳಕಿನ ಹೂವುಗಳಾಗಿ ಪರಿವರ್ತನೆಯಾಗಿ, ಕೆಲವೇ ಕ್ಷಣಗಳಲ್ಲಿ ನನ್ನ ದೇಹವೆಲ್ಲಾ ಬೆಳಕನ್ನು ಚಿಮ್ಮಿಸಲು ಪ್ರಾರಂಭಿಸಿ ಚರ್ಮದ ಮೂಲಕ ದೇಹದಿಂದ ಹೊರ ಹೊಮ್ಮಲಾರಂಭಿಸಿತು. –ಪೂಜಾಶ್ರೀ

ನನ್ನನ್ನು ಸೂಕ್ಷ್ಮ ಮಟ್ಟದಲ್ಲಿ ಮಾಡುವ ಕೆಲಸಗಳಿಗೆ ತೆಗೆದುಕೊಳ್ಳುವುದಾದರೆ ನನಗೆ ಒಂದು ಸೂಕ್ಷ್ಮ ಶರೀರ ಪ್ರಯಾಣವನ್ನು ಕರುಣಿಸುವಂತೆ ಋಷಿಗಳನ್ನು ಪ್ರಾರ್ಥಿಸಿದೆ. ಆಗ ಒಂದು ಅಗಾಧವಾದ ಶಕ್ತಿ ನನ್ನನ್ನು ಸುತ್ತುವರಿದು, ನನ್ನನ್ನು ಶರೀರದಿಂದ ಹೊರಗೆ ಎಳೆಯಿತು. ಆಗ ನಾನು ಒಂದು ಕಪ್ಪು ಸುರಂಗದೊಳಗೆ ಪ್ರವೇಶಿಸಿದೆ. ಅದು ಒಂದು ಹೀರು–ಬಟ್ಟಲಿನಂತಿದ್ದು, ಅದರೊಳಗೆ ಅತಿಯಾದ ಒತ್ತಡವಿತ್ತು. ನಾನು ಭಾರರಹಿತವಾಗಿ ಒಂದು ದೊಡ್ಡ ನಿರ್ವಾತ ಪ್ರದೇಶವನ್ನು ಪ್ರವೇಶಿಸಿದೆ. ಅಲ್ಲಿ ನನಗೆ ಬಹಳ ಸುಂದರವಾದ, ವರ್ಣರಂಜಿತವಾದ ಗಾಳಿಯಲ್ಲಿ ತೇಲುತ್ತಿರುವ ಮೀನಿನಂತಹ ಜೀವಿಗಳು ಕಂಡುಬಂದವು. ಇಂತಹ ಪ್ರದೇಶವನ್ನು ನಾನು ಹಿಂದೆಂದೂ ನೋಡಿರಲಿಲ್ಲ. ನಾನು ಕಣ್ಣು ಬಿಟ್ಟಾಗ 'ವಾಹ್' ಎಂದು ಉದ್ಘರಿಸಿದೆ. –ವಿದ್ಯಾ ವಿಶ್ವಾಮಿತ್ರ

ಕೆಲವು ದಿನಗಳ ಹಿಂದೆ ಶಿವಪೂಜೆಗಾಗಿ ಹೂವುಗಳನ್ನು ಕೊಡುತ್ತಿದ್ದ ಗಿಡವೊಂದು ಕೀಟಗಳ ಬಾಧೆಯಿಂದ ಬಳಲುತ್ತಿತ್ತು. ಅದರಿಂದ ಗಿಡವನ್ನು ರಕ್ಷಿಸಲು ನಮಗೆ ತಿಳಿದಿರುವ ಎಲ್ಲ ಕ್ರಮಗಳನ್ನು ಅನುಸರಿಸಿದರೂ ಅದು ವ್ಯರ್ಥವಾಯಿತು. ಒಂದು ದಿನ ನಾನು ಆ ಗಿಡದ ಮೇಲೆ ಕೀಟಗಳು ಇಲ್ಲದಂತೆ ಭಾವಿಸಿ ಬೆಳಕನ್ನು ಚಾನಲ್ ಮಾಡಿದೆ. ಮಾರನೆಯ ದಿನ ಆ ಗಿಡದ ಮೇಲೆ ಒಂದೇ ಒಂದು ಕೀಟವಿರಲಿಲ್ಲ. ಸ್ವಲ್ಪ ಸಮಯದ ನಂತರ ಈ ಘಟನೆಯನ್ನು ನನ್ನ ಸಹೋದ್ಯೋಗಿಗೆ ತಿಳಿಸಿದೆ. ಮಾರನೆಯ ದಿನವೇ ಗಿಡದ ಮೇಲೆ ಮತ್ತೆ ಕೀಟಗಳು ಕಾಣಿಸಿಕೊಂಡವು. ಆಗ ಗುರೂಜಿಯವರು ನಮ್ಮ ಅನುಭವಗಳನ್ನು ಮತ್ತೊಬ್ಬರೊಡನೆ ಹಂಚಿಕೊಳ್ಳಬಾರದೆಂದು ಹೇಳಿದುದರ ಪ್ರಾಮುಖ್ಯತೆ ಅರಿವಾಯಿತು. ಮತ್ತೆ ಚಾನಲ್ ಮಾಡಿದೆ. ಆದರೆ ಪ್ರಯೋಜನವಾಗಲಿಲ್ಲ. ನನ್ನ ತಪ್ಪನ್ನು ಅರಿತು ಮನ್ನಿಸುವಂತೆ ಗುರೂಜಿಯವರಲ್ಲಿ ಕ್ಷಮೆಯಾಚಿಸಿದ ನಂತರ ಆ ಕೀಟಗಳು ಮಾಯವಾದವು. ಈಗ ನಾನು ಗುರೂಜಿಯವರ ಮಾತುಗಳನ್ನು ಬಹು ಎಚ್ಚರಿಕೆಯಿಂದ ಪಾಲಿಸುತ್ತೇನೆ. –ಎ.ಕೆ. ಬಾಲಕೃಷ್ಣ ಮೋಹನ

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.200/–
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077. ಮಾನಸ ಫೌಂಡೇಶನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077
ಪ್ರಕಾಶನ ಸ್ಥಳ ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ಎ, ವೆಸ್ಟ್ ಆಫ್ ಕಾರ್ಡ್ ರೋಡ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು – 560 086. ಫೋನ್ : 2335 9992
ಸಂಪಾದಕರು : ಶ್ಯಾಮಲಾ ದೇವಿ